# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ:03-02-2023 ಶುಕ್ರವಾರದಂದು ಅಪರಾಹ್ನ 3.00 ಗಂಟೆಗೆ ನಡೆದ "ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆ"ಯ ನಡವಳಿಗಳು.**

**ಉಪಸ್ಥಿತರು:**

| | | |
|---|---|---|
| 1. | ಪ್ರೊ. ಎಚ್.ರಾಜಶೇಖರ್ | ಕುಲಪತಿ (ಪ್ರಭಾರ) ಹಾಗೂ ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಶ್ರೀ ಲಕ್ಷ್ಮಣ್ ಅಯ್ಯಪ್ಪ ಕುಲಗೋಡು ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3. | ಪ್ರೊ. ಜಿ.ವೆಂಕಟೇಶ್ ಕುಮಾರ್ | ಸದಸ್ಯರು |
| 4. | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 5. | ಡಾ. ಚೈತ್ರ ನಾರಾಯಣ | ಸದಸ್ಯರು |
| 6. | ಡಾ. ನಿರ್ಮಲ ಹೆಚ್.ಎಂ | ಸದಸ್ಯರು |
| 7. | ಡಾ. ಜಿ.ಗೋವಿಂದರಾಜು | ಸದಸ್ಯರು |
| 8. | ಡಾ. ಜಯ ಶಂಕರ್ ಎನ್ | ಸದಸ್ಯರು |
| 9. | ಶ್ರೀಮತಿ ವೈ.ಕೆ.ಪವಿತ್ರ | ಸದಸ್ಯರು |
| 10. | ಪ್ರೊ. ಎ.ಪಿ.ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 11. | ಶ್ರೀಮತಿ ಶೈಲಜ.ವಿ.ಆರ್., ಕೆಎಎಸ್ | ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ |
| 12. | ಡಾ. ಸಂಗೀತಾ ಗಜಾನನ್ ಭಟ್, ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |

**ಅನುಪಸ್ಥಿತರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಡಾ. ಎಸ್.ಹೆಚ್.ಗಂಗೇಗೌಡ

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಹೊಸದಾಗಿ ಜಂಟಿ ನಿರ್ದೇಶಕರಾಗಿ ಸಭೆಗೆ ಆಗಮಿಸಿರುವ ಶ್ರೀ ಲಕ್ಷಣ್ ಅಯ್ಯಪ್ಪ ಕುಲಗೋಡು, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು ಇವರನ್ನು ಪರಿಚಯಿಸುವ ಮೂಲಕ ಸಭೆಗೆ ಸ್ವಾಗತಿಸಿದರು.

ಹಾಗೂ

ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್, ಶ್ರೀ ಎಸ್.ಡಿ.ದೊಡ್ಡಚಾರಿ, ಡಾ. ಈ.ಸಿ.ನಿಂಗರಾಜ್ ಗೌಡ, ಡಾ. ದಾಮೋದರ, ಡಾ. ಸೈಯದ್ ಕಾರ್ರು ಮೊಹಿದ್ದೀನ್ ಹಾಗೂ ಡಾ. ಎಂ.ಎಸ್.ಗಿರಿಧರ್ ರಾವ್, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು ಇವರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ತದನಂತರ, ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿ, ಕುಲಪತಿಯವರ ಅನುಮತಿಯ ಮೇರೆಗೆ ಸಭೆಯಲ್ಲಿ ಕಾರ್ಯಸೂಚಿಯನ್ನು ಮಂಡಿಸಿದರು.

<table>
<tr><th>ವಿಷಯ ಸಂಖ್ಯೆ</th><th>ವಿಷಯ ಸಂಕ್ಷಿಪ್ತವಾಗಿ</th></tr>
<tr><td colspan="2">ಶ್ರೀಮತಿ ವೈ.ಕೆ.ಪವಿತ್ರ ಅವರು ಮಾತನಾಡಿ, ರೇಡಿಯೋ ಮಾನಸಕ್ಕೆ ಸಂಬಂಧಿಸಿದಂತೆ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ವಿದ್ಯಾರ್ಥಿಗಳಿಗೆ ರೇಡಿಯೋ ಮಾನಸವನ್ನು 03 ದಿನಗಳ ಅಂದರೆ 6 ಘಂಟೆಗಳ ಪ್ರಾಯೋಗಿಕ ರೀತಿ ಸದ್ಬಳಕೆ ಮಾಡಿಕೊಂಡರೆ ಅವರಿಗೆ ಅನುಕೂಲವಾಗುತ್ತದೆ. ಆದುದರಿಂದ ಅದನ್ನು ಅನುಷ್ಠಾನಗೊಳಿಸಬೇಕೆಂದು ಮತ್ತು ಲಲಿತ ಕಲಾ ಕಾಲೇಜಿನಲ್ಲಿ ಇರುವ ಡಿಪ್ಲೊಮಾ ಕೋರ್ಸ್‌ಗಳ ಬಗ್ಗೆ ಕಾರ್ಯಕ್ರಮಗಳ ಮಧ್ಯದಲ್ಲಿ ಪ್ರಚಾರಪಡಿಸಬೇಕೆಂದು ಸೇರ್ಪಡೆಗೊಳಿಸುವುದರೊಂದಿಗೆ ದಿನಾಂಕ: 09.12.2022 ರಂದು ಜರುಗಿದ "ಎಂಟನೇ ಸಾಮಾನ್ಯ ಸಿಂಡಿಕೇಟ್ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.</td></tr>
<tr><td colspan="2">ದಿನಾಂಕ: 09-12-2022ರಂದು ಜರುಗಿದ "ಎಂಟನೇ ಸಾಮಾನ್ಯ ಸಿಂಡಿಕೇಟ್ ಸಭೆ"ಯ ನಡವಳಿಯನ್ನು ದೃಢೀಕರಿಸಲಾಯಿತು ಹಾಗೂ ಕೈಗೊಂಡಿರುವ ಕ್ರಮಗಳನ್ನು ಗಮನಿಸಲಾಯಿತು.</td></tr>
<tr><td>ಸಾಮಾನ್ಯ ಸಭೆ 2023/1.1</td><td>Wiztoonz Academy of Media & Design, ಎಂ.ಐ.ಟಿ. ಕ್ಯಾಂಪಸ್, ಬೆಳವಾಡಿ, ಶ್ರೀರಂಗಪಟ್ಟಣ ತಾ., ಮಂಡ್ಯ ಜಿಲ್ಲೆ, ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ B.Sc. (Hons.) (Multimedia) ಮತ್ತು M.Sc. (Multimedia Design) ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ.</td></tr>
<tr><td></td><td>ಶ್ರೀ ಎಂ.ಬಿ.ಗಪ್ಪಣ್ಣ ಅವರು ಮಾತನಾಡಿ, Specialized Programme ಅಡಿಯಲ್ಲಿ ಸಂಸ್ಥೆಗಳು ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ನೀಡುವ ಮುನ್ನ ಪರಿವೀಕ್ಷಣಾ ಸಮಿತಿಯು ಆ ಸಂಸ್ಥೆಗಳಿಗೆ ಭೇಟಿ ನೀಡಿ, ಮೂಲಭೂತ ಸೌಕರ್ಯಗಳು ಹಾಗೂ ಇತರೆ ಅಗತ್ಯ ಮಾಹಿತಿಗಳನ್ನು ಪರಿಶೀಲಿಸಿದ ನಂತರ ವಿಶ್ವವಿದ್ಯಾನಿಲಯಕ್ಕೆ ಶಿಫಾರಸ್ಸನ್ನು ಸಲ್ಲಿಸುತ್ತಿರುವುದು ಸರಿಯಷ್ಟೆ. ಆದರೆ, "The University of Mysore-Recognition of Certain institutions for specified studies/specialized and Research Statutes 2008" ಅಧಿನಿಯಮದನ್ವಯ ಒಬ್ಬರು ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಪರಿವೀಕ್ಷಣಾ ಸಮಿತಿ ರಚನೆ ಮಾಡಬೇಕಾಗಿರುತ್ತದೆ. ಆದ್ದರಿಂದ, ಒಬ್ಬರು ಸಿಂಡಿಕೇಟ್ ಸದಸ್ಯರನ್ನು ಒಳಗೊಂಡಂತೆ ಪರಿಷ್ಕೃತ ಪರಿವೀಕ್ಷಣಾ ಸಮಿತಿ ರಚಿಸಿ, ಆ ಸಮಿತಿಯು ಸದರಿ ಸಂಸ್ಥೆಗೆ ಭೇಟಿ ನೀಡಿ ವರದಿ/ಶಿಫಾರಸ್ಸುಗಳನ್ನು ಸಲ್ಲಿಸಿದ ನಂತರವೇ ಸಂಸ್ಥೆಗಳಿಗೆ ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ನೀಡಲು ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು-1), ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು ಇವರ ಸಂಖ್ಯೆ: ಇಡಿ 94 ಯುಜಿವಿ 2002, ದಿನಾಂಕ 24-11-2022 ರಂದು ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಸುತ್ತೋಲೆಯನ್ನು ಹೊರಡಿಸಿದ್ದು, ಸದರಿ ಸುತ್ತೋಲೆಯಲ್ಲಿ "ರಾಜ್ಯದ ವಿಶ್ವವಿದ್ಯಾಲಯಗಳ ಸ್ಥಳೀಯ ವಿಚಾರಣೆ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ಸದಸ್ಯ/ಅಧ್ಯಕ್ಷರನ್ನಾಗಿ ನೇಮಿಸದೇ ಕೇವಲ ವಿಷಯ ಪರಿಣಿತರನ್ನು/ಶಿಕ್ಷಣ ತಜ್ಞರನ್ನು ನೇಮಿಸಬೇಕೆಂದು" ಸೂಚಿಸಿರುವುದನ್ನು ಸಭೆಯ ಗಮನಕ್ಕೆ ತರುತ್ತಾ, ಸರ್ಕಾರಕ್ಕೆ ಸ್ಪಷ್ಟೀಕರಣಕ್ಕಾಗಿ ಪತ್ರ ಬರೆಯಬಹುದೆಂದರು.<br><br>ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, B.Sc. (Hons.) (Multimedia) ಮತ್ತು M.Sc. (Multimedia Design) ಕೋರ್ಸ್‌ಗಳು ಆದಾಯ ಗಳಿಸುವ ಕೋರ್ಸ್‌ಗಳಾಗಿರುವುದರಿಂದ, ಮೈಸೂರು ವಿಶ್ವವಿದ್ಯಾನಿಲಯವು ಈ ಕೋರ್ಸ್‌ಗಳನ್ನು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಮೊದಲು ಪರಿಚಯಿಸಬೇಕೆಂದರು.</td></tr>
<tr><td>ತೀರ್ಮಾನ</td><td>ಒಬ್ಬರು ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಪರಿಷ್ಕೃತ ಪರಿವೀಕ್ಷಣಾ ಸಮಿತಿ ರಚನೆ ಮಾಡಿ, ಆ ಸಮಿತಿಯು Wiztoonz Academy of Media & Design, ಎಂ.ಐ.ಟಿ. ಕ್ಯಾಂಪಸ್, ಬೆಳವಾಡಿ, ಶ್ರೀರಂಗಪಟ್ಟಣ ತಾ., ಮಂಡ್ಯ ಜಿಲ್ಲೆ ಸಂಸ್ಥೆಗೆ ಭೇಟಿ ನೀಡಿ, ಸಂಸ್ಥೆಯಲ್ಲಿ ಮೂಲಭೂತ</td></tr>
</table>

| | |
|---|---|
| | ಸೌಕರ್ಯಗಳು ಹಾಗೂ ಇತರೆ ಅಗತ್ಯ ಮಾಹಿತಿಗಳನ್ನು ಮರುಪರಿಶೀಲಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ವರದಿ/ಶಿಫಾರಸ್ಸಿನನ್ವಯ Specialized Programme ಅಡಿಯಲ್ಲಿ B.Sc. (Hons.) (Multimedia) ಮತ್ತು M.Sc. (Multimedia Design) ಕೋರ್ಸ್‌ಗಳನ್ನು ಪ್ರಾರಂಭಿಸುವ ಸಂಬಂಧ ಮಾನ್ಯತೆ ನೀಡಲು ಸಭೆಯು ತೀರ್ಮಾನಿಸಿ ವಿಷಯವನ್ನು ಮುಂದೂಡಲಾಯಿತು. |
| ಸಾಮಾನ್ಯ ಸಭೆ 2023/1.2 | Oxford Research and Development Centre, 6ನೇ ಬ್ಲಾಕ್, ಸರ್. ಎಂ. ವಿಶ್ವೇಶ್ವರಯ್ಯ ಲೇಔಟ್, ಉಲ್ಲಾಳ ಮುಖ್ಯ ರಸ್ತೆ, ಬೆಂಗಳೂರು, ಇವರ ಸಂಸ್ಥೆಯಲ್ಲಿ Commerce ವಿಷಯದಲ್ಲಿ ಹೊಸದಾಗಿ ಸಂಶೋಧನಾ ಕಾರ್ಯ ಕೈಗೊಳ್ಳಲು ವಿಶ್ವವಿದ್ಯಾನಿಲಯದ ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| | ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಹೊಸದಾಗಿ ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆ ನೀಡಬಾರದೆಂದು ತೀರ್ಮಾನಿಸಲಾಗಿದೆ ಹಾಗೂ ಕೆಲವೊಂದು ಸಂಶೋಧನಾ ಕೇಂದ್ರದಲ್ಲಿ ಮೂಲಭೂತ ಸೌಕರ್ಯಗಳೊಂದಿಗೆ ಸಂಶೋಧನೆಗೆ ಪೂರಕವಾದ ಗುಣಮಟ್ಟವನ್ನು ಹೊಂದಿರುವುದಿಲ್ಲ. ಈ ಸಂಬಂಧ ಪಿ.ಎಂ.ಇ.ಬಿ.ಗೆ ಒಂದು ಪತ್ರವನ್ನು ಬರೆದು ಇನ್ನು ಮುಂದೆ ವಿಶ್ವವಿದ್ಯಾನಿಲಯದ ವತಿಯಿಂದ ಹೊಸದಾಗಿ ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆ ನೀಡಬಾರದು ಹಾಗೂ ಇದುವರೆವಿಗೂ ಮಾನ್ಯತೆ ನೀಡಿರುವ ಸಂಶೋಧನಾ ಕೇಂದ್ರಗಳನ್ನು ಒಂದು ಸಮಿತಿ ರಚಿಸಿ ವಿಚಾರಣೆ/ತನಿಖೆ ಮಾಡಬೇಕೆಂದು ತಿಳಿಸಿದ್ದರೂ, ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲವೆಂದರು.<br><br>ಕುಲಸಚಿವರು ಮಾತನಾಡಿ, ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು-1), ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು ಇವರ ಸಂಖ್ಯೆ: ಇಡಿ 94 ಯುಜಿವಿ 2002, ದಿನಾಂಕ 24-11-2022 ರಂದು ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಸುತ್ತೋಲೆಯನ್ನು ಹೊರಡಿಸಿದ್ದು, ಸದರಿ ಸುತ್ತೋಲೆಯಲ್ಲಿ "ರಾಜ್ಯದ ವಿಶ್ವವಿದ್ಯಾಲಯಗಳ ಸ್ಥಳೀಯ ವಿಚಾರಣೆ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ಸದಸ್ಯ/ಅಧ್ಯಕ್ಷರನ್ನಾಗಿ ನೇಮಿಸದೇ ಕೇವಲ ವಿಷಯ ಪರಿಣಿತರನ್ನು/ಶಿಕ್ಷಣ ತಜ್ಞರನ್ನು ನೇಮಿಸಬೇಕೆಂದು" ಸೂಚಿಸಿರುವುದನ್ನು ಸಭೆಯ ಗಮನಕ್ಕೆ ತಂದರು.<br><br>ಈ ಸಂಬಂಧ ಮಾನ್ಯ ಕುಲಪತಿಗಳು ಮಾತನಾಡಿ, ಇದುವರೆವಿಗೂ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ನೀಡಿರುವ ಸಂಶೋಧನಾ ಕೇಂದ್ರಗಳಿಗೆ ಭೇಟಿ ನೀಡಿ, ಮೂಲಭೂತ ಸೌಕರ್ಯಗಳು, ಸಂಶೋಧನೆಗೆ ಪೂರಕವಾದ ಗುಣಮಟ್ಟ, ಮಾರ್ಗದರ್ಶಕರುಗಳ ಹಾಗೂ ಸಂಶೋಧನಾ ವಿದ್ಯಾರ್ಥಿಗಳ ವಿವರಗಳು ಹಾಗೂ ಇತರೆ ಮಾಹಿತಿಗಳನ್ನು ಪರಿಶೀಲಿಸಿ ಶಿಫಾರಸ್ಸು/ವಿವರವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಬಗ್ಗೆ ಒಂದು ಪರಿಶೀಲನಾ ಸಮಿತಿ ರಚಿಸಲಾಗುವುದೆಂದರು. |
| ತೀರ್ಮಾನ | ಒಬ್ಬರು ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಪರಿಷ್ಕೃತ ಪರಿವೀಕ್ಷಣಾ ಸಮಿತಿ ರಚನೆ ಮಾಡಿ, ಆ ಸಮಿತಿಯು Oxford Research and Development Centre, 6ನೇ ಬ್ಲಾಕ್, ಸರ್. ಎಂ. ವಿಶ್ವೇಶ್ವರಯ್ಯ ಲೇಔಟ್, ಉಲ್ಲಾಳ ಮುಖ್ಯ ರಸ್ತೆ, ಬೆಂಗಳೂರು ಸಂಸ್ಥೆಗೆ ಭೇಟಿ ನೀಡಿ, ಸಂಸ್ಥೆಯಲ್ಲಿ ಮೂಲಭೂತ ಸೌಕರ್ಯಗಳು ಹಾಗೂ ಇತರೆ ಅಗತ್ಯ ಮಾಹಿತಿಗಳನ್ನು ಮರುಪರಿಶೀಲಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ವರದಿ/ಶಿಫಾರಸ್ಸಿನನ್ವಯ Commerce ವಿಷಯದಲ್ಲಿ ಹೊಸದಾಗಿ ಸಂಶೋಧನಾ ಕಾರ್ಯ ಕೈಗೊಳ್ಳಲು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ನೀಡಲು ತೀರ್ಮಾನಿಸಿ ವಿಷಯವನ್ನು ಮುಂದೂಡಲಾಯಿತು. |

**ಸಾಮಾನ್ಯ ಸಭೆ 2023/1.3**

ವಿಶ್ವವಿದ್ಯಾನಿಲಯದ ಅತಿಥಿ ಗೃಹದ ಕೊಠಡಿಗಳ ದರಗಳನ್ನು ಪರಿಷ್ಕರಿಸುವ ಬಗ್ಗೆ.

**ತೀರ್ಮಾನ**

ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಅತಿಥಿಗೃಹ ಮತ್ತು ಡ್ಯಾನಿಡಾ ಅತಿಥಿಗೃಹಗಳ ಕೊಠಡಿ ಬಾಡಿಗೆಯನ್ನು ಪ್ರಸ್ತುತವಿರುವ ದರಕ್ಕೆ ಶೇ.35 ರಷ್ಟು ಹೆಚ್ಚಿಸಿ, ಈ ಕೆಳಕಂಡಂತೆ ಪರಿಷ್ಕರಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.

**"ಎ" ಗುಂಪು:** ವಿಶ್ವವಿದ್ಯಾನಿಲಯದ ಕಾರ್ಯನಿಮಿತ್ತ ಬರುವವರಿಗೆ: ಜಿ.ಎಸ್.ಟಿ ಹೊರತುಪಡಿಸಿ

| ಕ್ರ.ಸಂ. | ಕೊಠಡಿಗಳ ವಿವರ | ಪ್ರಸ್ತುತ ದರ | ಪರಿಷ್ಕೃತ ದರ |
|---|---|---|---|
| 1 | ಒಂಟಿ ಕೊಠಡಿ | 300=00 | 405=00 |
| 2 | ಜೋಡಿ ಕೊಠಡಿ (ಮಾನಸ ಮತ್ತು ಡ್ಯಾನಿಡಾ) | 600=00 | 810=00 |
| 3 | ಡಿಲೆಕ್ಸ್ ಕೊಠಡಿ | 700=00 | 945=00 |
| 4 | ವಿ.ಐ.ಪಿ ಕೊಠಡಿ (ಮಾನಸ ಮತ್ತು ಡ್ಯಾನಿಡಾ) | 800=00 | 1,080=00 |
| 5 | ವಿ.ವಿ.ಐ.ಪಿ ಸೂಟ್ | 900=00 | 1,215=00 |

"ಎ"ಗುಂಪಿನಲ್ಲಿರುವ ದರದಲ್ಲಿ ಶೇ.50%ರ ರಿಯಾಯಿತಿ (ವಿ.ವಿ.ಐ.ಪಿ.ಸೂಟ್ ಹಾಗೂ ಜಿ.ಎಸ್.ಟಿ ಹೊರತುಪಡಿಸಿ)

**"ಬಿ"ಗುಂಪು:** ಸಿಂಡಿಕೇಟ್, ಎ.ಸಿ. ಸದಸ್ಯರುಗಳಿಗೆ ಮಾತ್ರ (ಸಿಂಡಿಕೇಟ್ ಮತ್ತು ಎ.ಸಿ.ಸದಸ್ಯರುಗಳು ಆಯಾಯ ಸಭೆಗಳಿಗೆ ಬಂದಾಗ ಮಾತ್ರ)

**"ಸಿ" ಗುಂಪು:** ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಡದ ಇನ್ನಿತರರಿಗೆ: ಜಿ.ಎಸ್.ಟಿ. ಹೊರತುಪಡಿಸಿ.

| ಕ್ರ.ಸಂ | ಕೊಠಡಿಗಳ ವಿವರ | ಪ್ರಸ್ತುತ ದರ | ಪರಿಷ್ಕೃತ ದರ |
|---|---|---|---|
| 1 | ಒಂಟಿ ಕೊಠಡಿ | 500=00 | 675=00 |
| 2 | ಜೋಡಿ ಕೊಠಡಿ (ಮಾನಸ ಮತ್ತು ಡ್ಯಾನಿಡಾ) | 1,000=00 | 1,350=00 |
| 3 | ಡಿಲೆಕ್ಸ್ ಕೊಠಡಿ | 1,200=00 | 1,620=00 |
| 4 | ವಿ.ಐ.ಪಿ ಕೊಠಡಿ (ಮಾನಸ ಮತ್ತು ಡ್ಯಾನಿಡಾ) | 1,500=00 | 2,025=00 |
| 5 | ವಿ.ವಿ.ಐ.ಪಿ ಸೂಟ್ | 2,000=00 | 2,700=00 |

**ಸಾಮಾನ್ಯ ಸಭೆ 2023/1.4**

ಅಭಿವೃದ್ಧಿ ಅಧ್ಯಯನ ಸಂಸ್ಥೆಗೆ ನಿರ್ದೇಶಕರನ್ನು ನೇಮಕ ಮಾಡುವ ಬಗ್ಗೆ.

ಡಾ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ಡಾ. ಹೆಚ್.ಎಂ.ಚಂದ್ರಶೇಖರ್, ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರ ಮೇಲೆ ದೂರುಗಳಿದ್ದು, ದೂರಿಗೆ ಪ್ರತಿಯಾಗಿ ಆಡಿಯೋ/ವಿಡಿಯೋ ದಾಖಲೆಗಳಿರುತ್ತದೆ. ಆದರೂ ಇದುವರೆವಿಗೂ ವಿಶ್ವವಿದ್ಯಾನಿಲಯವು ವಿಚಾರಣೆ/ತನಿಖೆ ಮಾಡಿ ಕ್ರಮ ಕೈಗೊಂಡಿರುವುದಿಲ್ಲ ಎಂದು ತಿಳಸುತ್ತಾ, ಸಭೆಯಲ್ಲಿ ಆಡಿಯೋ/ವಿಡಿಯೋ ದಾಖಲೆಯನ್ನು ಅಧ್ಯಕ್ಷರಿಗೆ ನೀಡಿದರು.

ಡಾ. ಹೆಚ್.ಎಂ.ಚಂದ್ರಶೇಖರ್, ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 01-04-2021 ರಿಂದ ಜಾರಿಗೆ ಬಂದಂತೆ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಪ್ರಭಾರ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದ್ದು, ಇವರ ಅವಧಿಯು ದಿನಾಂಕ: 31-03-2023ಕ್ಕೆ ಮುಕ್ತಾಯಗೊಳ್ಳುತ್ತಿದೆ ಹಾಗೂ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಅಧ್ಯಾಪಕರುಗಳ ಜೇಷ್ಠತೆಗನುಸಾರವಾಗಿ ಸರದಿಯ ಮೇಲೆ ಡಾ. ಮೀರಾ.ಎಂ, ಸಹ ಪ್ರಾಧ್ಯಾಪಕರು ಅವರು ಹಿರಿಯರಾಗಿರುತ್ತಾರೆ.

**ತೀರ್ಮಾನ**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಡಾ. ಮೀರಾ.ಎಂ, ಸಹ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 01-04-2023 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಅಭಿವೃದ್ಧಿ ಅಧ್ಯಯನ ಸಂಸ್ಥೆಯ

| | |
|---|---|
| | ನಿರ್ದೇಶಕರನ್ನಾಗಿ ನೇಮಕ ಮಾಡಲು ಹಾಗೂ ಡಾ. ಹೆಚ್.ಎಂ.ಚಂದ್ರಶೇಖರ್ ಸಂಬಂಧ ನೀಡಿರುವ ಲಿಖಿತ ದೂರಿನ ಬಗ್ಗೆ ನಿಯಮಾನುಸಾರ ಕ್ರಮ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು |
| ಸಾಮಾನ್ಯ ಸಭೆ 2023/1.5 | Specialized Programme ಅಡಿಯಲ್ಲಿನ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ- ಅನುಸಮರ್ಥನೆಗಾಗಿ. |
| | ಡಾ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, Diploma and P.G. Diploma in Health Safety and Environment ಕೋರ್ಸ್‌ಗೆ ಅಧ್ಯಯನ ಮಂಡಳಿಯನ್ನು ಪುನರ್‌ರಚನೆ ಸಮಿತಿ ಪಟ್ಟಿಯ ಕ್ರಮ ಸಂಖ್ಯೆ: 4,5,6 ಮತ್ತು 7ರಲ್ಲಿ ಒಂದೇ ವಿಭಾಗದವರಾಗಿರುತ್ತಾರೆ. ಆದರೆ, Health Safety and Environment ಗೆ ಸಂಬಂಧಿಸಿದ ವಿಷಯತಜ್ಞರು ಯಾರು ಇರುವುದಿಲ್ಲ. ಇನ್ನು ಮುಂದೆ ಅಧ್ಯಯನ ಮಂಡಳಿಯನ್ನು ರಚಿಸುವ / ಪುನರ್‌ರಚಿಸುವ ಸಮಿತಿಯಲ್ಲಿ ಆಯಾಯ ವಿಷಯ/ಕೋರ್ಸ್‌ಗೆ ಸಂಬಂಧಿಸಿದ ವಿಷಯ ತಜ್ಞರನ್ನು ನೇಮಕ ಮಾಡುವುದು ಸೂಕ್ತವೆಂದರು. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000, 33 (1) ಮತ್ತು (2) ಅಧಿನಿಯಮದನ್ವಯ Specialized Programme ಅಡಿಯಲ್ಲಿ Mangalore Institute of Fire & Safety Engineering, 1ನೇ ಮಹಡಿ, ನಂ.331, ನಾರಾಯಣಶಾಸ್ತ್ರಿ ರಸ್ತೆ, ಮೈಸೂರು ಸಂಸ್ಥೆಯ Diploma and P.G. Diploma in Health Safety and Environment ಕೋರ್ಸ್‌ಗೆ ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಅಧ್ಯಯನ ಮಂಡಳಿಯನ್ನು ಪುನರ್‌ರಚನೆ ಮಾಡಿ ಅಧಿಸೂಚನೆ ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು ಹಾಗೂ ಸಂಬಂಧಪಟ್ಟ ವಿಷಯ ತಜ್ಞರನ್ನು ನೇಮಿಸಲು ಸಭೆಯು ಒಪ್ಪಿತು. |
| ಸಾಮಾನ್ಯ ಸಭೆ 2023/1.6 | ಡಾ. ವಿಶ್ವನಾಥ, ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರು ಜವಹರಲಾಲ್ ನೆಹರು ವಿಶ್ವವಿದ್ಯಾನಿಲಯ, ದೆಹಲಿ ಇಲ್ಲಿನ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ಇವರ ಹುದ್ದೆಯ ಮೇಲಿನ ಹಕ್ಕನ್ನು ಮತ್ತೊಂದು ವರ್ಷಕ್ಕೆ ಕಾಯ್ದಿರಿಸಲು ಮನವಿ ಮಾಡಿರುವ ಬಗ್ಗೆ. |
| | ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ಖಾಯಂ ಅಧ್ಯಾಪಕರುಗಳಿಗೆ ಹುದ್ದೆಯ ಮೇಲಿನ ಹಕ್ಕನ್ನು ಕಾಯ್ದಿರಿಸಲು ಅಧಿನಿಯಮದಲ್ಲಿ ಎರಡು ವರ್ಷಗಳು ಮಾತ್ರ ಅವಕಾಶವಿರುತ್ತದೆ. ಆದ್ದರಿಂದ ಅಧಿನಿಯಮದ 20(ಬಿ) ಮತ್ತು 17(ಬಿ) ಅನ್ನು ಪರಾಮರ್ಶಿಸಿ, ಮುಂದಿನ ಕ್ರಮ ತೆಗೆದುಕೊಳ್ಳುವುದು ಸೂಕ್ತವೆಂದರು. |
| ತೀರ್ಮಾನ | ಡಾ. ವಿಶ್ವನಾಥ, ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರು ಜವಹರಲಾಲ್ ನೆಹರು ವಿಶ್ವವಿದ್ಯಾನಿಲಯ, ದೆಹಲಿ ಇಲ್ಲಿನ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ಇವರ ಹುದ್ದೆಯ ಮೇಲಿನ ಹಕ್ಕನ್ನು ಮತ್ತೊಂದು ವರ್ಷಕ್ಕೆ ಕಾಯ್ದಿರಿಸಲು ಮನವಿ ಮಾಡಿರುವ ಸಂಬಂಧ ಅಧಿನಿಯಮದಲ್ಲಿ ಅವಕಾಶವಿದೆಯೇ ಎಂದು ಪರಿಶೀಲಿಸುವುದರೊಂದಿಗೆ, ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಪಡೆದು ಮುಂದಿನ ಕ್ರಮ ತೆಗೆದುಕೊಳ್ಳಲು ಸಭೆಯು ನಿರ್ಣಯಿಸಿತು. |
| ಸಾಮಾನ್ಯ ಸಭೆ 2023/1.7 | ಮೈಸೂರು ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳ ಆಯ್ಕೆ ಸಂಬಂಧ ಜರುಗಿದ ಶೋಧನಾ ಸಮಿತಿ ಸಭೆಯ ಖರ್ಚು-ವೆಚ್ಚಗಳ ಪಟ್ಟಿಯನ್ನು ಅನುಸಮರ್ಥನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳ ಆಯ್ಕೆ ಸಂಬಂಧ ಜರುಗಿದ ಶೋಧನಾ ಸಮಿತಿ ಸಭೆಯ ಖರ್ಚು-ವೆಚ್ಚಗಳ ಪಟ್ಟಿಯನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2023/1.8 | ಜಾಕೀರ್ ಹುಸೇನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |
| ತೀರ್ಮಾನ | ಜಾಕೀರ್ ಹುಸೇನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಸಂಬಂಧ ವಿವೇಚಾನುಸಾರ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಭೆಯು ತೀರ್ಮಾನಿಸಿತು. |

| | |
|---|---|
| ಸಾಮಾನ್ಯ ಸಭೆ 2023/1.9 | ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು, ಸ್ನಾತಕೋತ್ತರ ಕೇಂದ್ರಗಳು ಹಾಗೂ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಎಲ್ಲಾ ಆಡಳಿತ ಕಛೇರಿಗಳಲ್ಲಿ ಅಗತ್ಯವಿರುವ ದೂರವಾಣಿ ಸಂಪರ್ಕಗಳನ್ನು ಹೊರತುಪಡಿಸಿ, ಉಳಿದ ಸಂಪರ್ಕಗಳನ್ನು ಕಡಿತಗೊಳಿಸುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು/ಸ್ನಾತಕೋತ್ತರ ಕೇಂದ್ರಗಳ ಅಧ್ಯಕ್ಷರು/ ನಿರ್ದೇಶಕರುಗಳಿಗೆ ಒಂದು ಸ್ವತಂತ್ರ ಸಂಪರ್ಕವಿರುವಂತೆ (Independent connection) ಕಛೇರಿಗೆ ಸಮಾನಾಂತರ ಸಂಪರ್ಕ (Parallel connection) ದೂರವಾಣಿಯನ್ನು ಒದಗಿಸುವುದು ಹಾಗೂ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಎಲ್ಲಾ ಆಡಳಿತ ಕಛೇರಿಗಳಲ್ಲಿ ಅಗತ್ಯವಿರುವ ದೂರವಾಣಿ ಸಂಪರ್ಕಗಳನ್ನು ಹೊರತುಪಡಿಸಿ, ಉಳಿದ ದೂರವಾಣಿ ಸಂಪರ್ಕಗಳನ್ನು ಕಡಿತಗೊಳಸಲು ಸಭೆಯಲ್ಲಿ ನಿರ್ಧರಿಸಲಾಯಿತು. |
| ಸಾಮಾನ್ಯ ಸಭೆ 2023/1.10 | 2020ರಲ್ಲಿ ನಡೆದ ಪಿಹೆಚ್.ಡಿ. ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಪಿಹೆಚ್.ಡಿ.ಗೆ ನೋಂದಣಿಯಾಗಲು ಕಾಲಾವಕಾಶವನ್ನು ವಿಸ್ತರಿಸುವ ಬಗೆಗೆ. |
| ತೀರ್ಮಾನ | 2020ರಲ್ಲಿ ನಡೆದ ಪಿಹೆಚ್.ಡಿ. ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಪಿಹೆಚ್.ಡಿ.ಗೆ ನೋಂದಣಿಯಾಗಲು ಮತ್ತೊಮ್ಮೆ ಆರು ತಿಂಗಳ ಕಾಲಾವಕಾಶವನ್ನು ವಿಸ್ತರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2023/1.11 | ಶ್ರೀಮತಿ ರತ್ನಾವತಿ ಎಸ್., ಕಂಪ್ಯೂಟರ್ ಆಪರೇಟರ್, ಹಣಕಾಸು ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಆಸ್ಟ್ರೇಲಿಯಾ ದೇಶಕ್ಕೆ ತೆರಳಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ಶ್ರೀಮತಿ ರತ್ನಾವತಿ ಎಸ್., ಕಂಪ್ಯೂಟರ್ ಆಪರೇಟರ್, ಹಣಕಾಸು ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ದಿನಾಂಕ: 06-02-2023 ರಿಂದ 29-07-2023ರವರೆಗೆ (ಒಟ್ಟು 174 ದಿವಸಗಳು) ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ಆಸ್ಟ್ರೇಲಿಯಾ ದೇಶಕ್ಕೆ ಹೋಗಿಬರಲು ಹಾಗೂ ಕೇಂದ್ರ ಸ್ಥಾನವನ್ನು ಬಿಡಲು ಸಭೆಯು ಅನುಮತಿಸಿತು. |
| ಸಾಮಾನ್ಯ ಸಭೆ 2023/1.12 | ವಿಶ್ವವಿದ್ಯಾನಿಲಯದ 103ನೇ ವಾರ್ಷಿಕ ಘಟಿಕೋತ್ಸವದ ಸಂಬಂಧ ದಿನಾಂಕ, ಸಮಯ, ಸ್ಥಳ ನಿಗಧಿಪಡಿಸುವ ಹಾಗೂ ಮುಖ್ಯ ಅತಿಥಿಗಳನ್ನು ಆಹ್ವಾನಿಸುವ ಬಗೆಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ 103ನೇ ವಾರ್ಷಿಕ ಘಟಿಕೋತ್ಸವದ ಸಂಬಂಧ ದಿನಾಂಕ, ಸಮಯ, ಸ್ಥಳ ನಿಗಧಿಪಡಿಸುವ ಹಾಗೂ ಮುಖ್ಯ ಅತಿಥಿಗಳನ್ನು ಆಹ್ವಾನಿಸುವ ಸಂಬಂಧ ಒಂದು ಪಟ್ಟಿಯನ್ನು ಸಿದ್ಧಪಡಿಸಿ, ಮುಂದಿನ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2023/1.13 | 103ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪಡೆಯಲು ಗಣ್ಯರ ಹೆಸರುಗಳನ್ನು ಶಿಫಾರಸ್ಸು ಮಾಡುವ ಬಗ್ಗೆ. |
| ತೀರ್ಮಾನ | 103ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪಡೆಯಲು ಗಣ್ಯರ ಹೆಸರುಗಳನ್ನು ಶಿಫಾರಸ್ಸು ಮಾಡುವ ಒಂದು ಪಟ್ಟಿಯನ್ನು ಸಿದ್ಧಪಡಿಸಿ, ಮುಂದಿನ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2023/1.14 | ಡಾ. ಚಂದ್ರನಾಯಕ್ ಎಸ್., ಸಂಯೋಜಕರು (ಪ್ರಭಾರ), ಐ.ಓ.ಇ. ಯೋಜನೆ, ವಿಜ್ಞಾನ ಭವನ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರನ್ನು ಹುದ್ದೆಯಿಂದ ಬದಲಾಯಿಸುವ ಕುರಿತು. |
| | ಡಾ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ಮೊದಲು ಐ.ಓ.ಇ ಯೋಜನೆಯ ಕಾರ್ಯಚಟುವಟಿಕೆಯನ್ನು ನಿರ್ವಹಿಸಲು ಪ್ರೊ.ನಿರಂಜನ್ ಅವರನ್ನು ನಿಯೋಜಿಸಲಾಗಿತ್ತು. ಇವರು ಗುಲ್ಬರ್ಗಾ ವಿಶ್ವವಿದ್ಯಾನಿಲಯಕ್ಕೆ ಕುಲಪತಿಗಳಾಗಿ ನೇಮಕಗೊಂಡ ನಂತರ ಪ್ರೊ. ಜಿ.ಹೇಮಂತಕುಮಾರ್ ಅವರನ್ನು ಸಂಯೋಜಕರನ್ನಾಗಿ ನಿಯೋಜಿಸಲಾಗಿರುತ್ತದೆ. ಇವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನೇಮಕಗೊಂಡ ನಂತರ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಖಾಯಂ ಪ್ರಾಧ್ಯಾಪಕರುಗಳಿದ್ದರೂ ಸಹ ಅವರುಗಳನ್ನು ಹೊರತುಪಡಿಸಿ, ಮಾನಸಗಂಗೋತ್ರಿಯ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದಲ್ಲಿ ಕಾರ್ಯಗತಗೊಂಡಿರುವ ICAR-AICRP ಯೋಜನೆಯಲ್ಲಿ ಪ್ರಿನ್ಸಿಪಾಲ್ ಇನ್ವೆಸ್ಟಿಗೇಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದ |

| | |
|---|---|
| | ಡಾ.ಎಸ್.ಚಂದ್ರನಾಯಕ್ ಅವರನ್ನು ಐ.ಓ.ಇ ಯೋಜನೆಯ ಪ್ರಭಾರ ಸಂಯೋಜಕರನ್ನಾಗಿ ನೇಮಕ ಮಾಡಲಾಗಿದೆ. ಈ ಕಾರಣದಿಂದ ಇವರನ್ನು ಹುದ್ದೆಯಿಂದ ಬದಲಾಯಿಸುವ ಜೊತೆಗೆ ICAR-AICRP ಯೋಜನೆಯಲ್ಲಿ ಪ್ರಿನ್ಸಿಪಾಲ್ ಇನ್ವೆಷ್ಟಿಗೇಟರ್ ಆಗಿ ಕಾರ್ಯನಿರ್ವಹಿಸುತ್ತಿರುವ ಡಾ.ಎಸ್.ಚಂದ್ರನಾಯಕ್ ಇವರನ್ನು ನೇಮಕ ಮಾಡಿರುವುದರ ಬಗ್ಗೆ ವಿಶ್ವವಿದ್ಯಾನಿಲಯ ನಿವೃತ್ತ/ಹಾಲಿ ನ್ಯಾಯಾಧೀಶರನ್ನೊಳಗೊಂಡಂತೆ ಸಮಿತಿ ರಚಿಸಿ ತನಿಖೆ/ವಿಚಾರಣೆ ಕೈಗೊಳ್ಳುವುದರೊಂದಿಗೆ ಐ.ಓ.ಇ.ನಲ್ಲಿ ಮಾಹಿತಿ ಹಕ್ಕು ಕಾಯ್ದೆಗಳ ಮಾಹಿತಿಗೆ ಸಂಬಂಧಿಸಿದಂತೆ ಸಾರ್ವಜನಿಕ ಮಾಹಿತಿ ಅಧಿಕಾರಿ ಎಂಬ ಹುದ್ದೆಯನ್ನು ಸಹ ರದ್ದುಗೊಳಸಬೇಕೆಂದರು. |
| ತೀರ್ಮಾನ | ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಹಾಗೂ ವಿವಿ ಆದೇಶ ಸಂಖ್ಯೆ: ಡಿವಿ.2/ ಐಓಇ/ ಇತರೆ/2011-2012 ದಿನಾಂಕ: 24-01-2019ರನ್ವಯ ಐ.ಓ.ಇ ಯೋಜನೆಗೆ ಪ್ರಭಾರ ಸಂಯೋಜಕರನ್ನು ನೇಮಕ ಮಾಡಿರುವ ಆದೇಶದಲ್ಲಿ ಡಾ.ಎಸ್.ಚಂದ್ರನಾಯಕ್, ಹೆಸರಿನ ಎದುರಾಗಿ ನಮೂದಾಗಿರುವ ಪ್ರಾಧ್ಯಾಪಕರು ಮತ್ತು ಸಂಯೋಜನಾಧಿಕಾರಿ ಎಂಬ ಪದನಾಮವನ್ನು ಬದಲಾಯಿಸುವುದರೊಂದಿಗೆ ಐ.ಓ.ಇ ಸಂಯೋಜನಾಧಿಕಾರಿ ಹುದ್ದೆಯಿಂದ ಬಿಡುಗಡೆ ಮಾಡಿ, ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದಲ್ಲಿ ಕಾರ್ಯಗತಗೊಂಡಿರುವ ICAR-AICRP ಯೋಜನೆಯಲ್ಲಿ ಪ್ರಿನ್ಸಿಪಾಲ್ ಇನ್ವೆಷ್ಟಿಗೇಟರ್ ಆಗಿ ಹಿಂದಿರುಗಿಸಿ, ಒಬ್ಬರು ವಿಜ್ಞಾನ ನಿಕಾಯದ ಖಾಯಂ ಪ್ರಾಧ್ಯಾಪಕರನ್ನು ಐ.ಓ.ಇ ಸಂಯೋಜನಾಧಿಕಾರಿಯಾಗಿ ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ನೇಮಿಸಿ ಆದೇಶ ಹೊರಡಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. |
| ಸಾಮಾನ್ಯ ಸಭೆ 2023/1.15 | ಸಿ.ಎಸ್.ಎಸ್.ಇ.ಐ.ಪಿ. ಕೇಂದ್ರದಲ್ಲಿ Ministry of Tribal Affairs ಭಾರತ ಸರ್ಕಾರ ವತಿಯಿಂದ ಕೈಗೊಂಡಿರುವ ಯೋಜನೆಯ ಅನುದಾನವನ್ನು ವಿನಿಯೋಗಿಸುವ ಸಂಬಂಧ ಕೆನರಾ ಬ್ಯಾಂಕ್‌ನಲ್ಲಿ ಹೊಸದಾಗಿ ಉಳಿತಾಯ ಖಾತೆ ತೆರೆದಿರುವ ಬಗ್ಗೆ ಅನುಸಮರ್ಥನೆ ಕೋರಿ. |
| ತೀರ್ಮಾನ | Ministry of Tribal Affairs ವತಿಯಿಂದ ಕೈಗೊಂಡಿರುವ ಯೋಜನೆಯ ಸಂಬಂಧ ಅನುದಾನಿತ ಸಂಸ್ಥೆಯವರು ಮುಂದಿನ ಕಂತು ಹಣ ಬಿಡುಗಡೆ ಮಾಡಲು ಕೆನರಾ ಬ್ಯಾಂಕ್ ಶಾಖೆಯಲ್ಲಿ ಉಳಿತಾಯ ಖಾತೆಯನ್ನು ತೆರೆಯಬೇಕೆಂದು ನಿರ್ದೇಶಿಸಿರುವ ಹಿನ್ನೆಲೆಯಲ್ಲಿ, ದಿನಾಂಕ: 30.11.2022ರಂದು ಹಣಕಾಸು ಅಧಿಕಾರಿಯವರ ಹೆಸರಿನಲ್ಲಿ ಶೂನ್ಯ ಉಳಿತಾಯ ಖಾತೆಯನ್ನು ತೆರೆದಿರುವುದನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2023/1.16 | ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಅಧ್ಯಾಪಕ/ಅಧ್ಯಾಪಕೇತರ ನೌಕರರುಗಳ ವೇತನ/ಸಂಭಾವನೆಯನ್ನು ಪರಿಷ್ಕರಿಸುವ ಸಂಬಂಧಿಸಿದಂತೆ ಹಣಕಾಸು ಸಮಿತಿ ಸಭೆಯ ನಿರ್ಣಯವನ್ನು "ಸಿಂಡಿಕೇಟ್" ಸಭೆಯ ಮುಂದೆ ಅವಗಾಹನೆಗಾಗಿ ಮಂಡಿಸುವ ಬಗ್ಗೆ. |
| | ರಾಜ್ಯಪಾಲರ ಅಧೀನ ಕಾರ್ಯದರ್ಶಿ, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜ ಭವನ, ಬೆಂಗಳೂರು ಇವರ ಪತ್ರ ಸಂಖ್ಯೆ: ಜಿಎಸ್ 13 ಜಿಯುಎಂ 2021, ದಿನಾಂಕ: 28-09-2021 ರಂದು ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳಗೂ ಸುತ್ತೋಲೆ ಕಳುಹಿಸಲಾಗಿದ್ದು, ಸದರಿ ಸುತ್ತೋಲೆಯಲ್ಲಿ "ಕುಲಪತಿಗಳ ಅಧಿಕಾರ ಅವಧಿಯು 02 ತಿಂಗಳೊಳಗೆ ಕೊನೆಗೊಂಡರೆ, ಯಾವುದೇ ಪ್ರಮುಖ ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳದಂತೆ ಕರ್ನಾಟಕದ ವಿಶ್ವವಿದ್ಯಾನಿಲಯಗಳ ಕುಲಪತಿಗಳಿಗೆ ನಿರ್ದೇಶಿಸಲಾಗಿದೆ. ಯಾವುದೇ ಸನ್ನಿಹಿತ ಪ್ರಮುಖ ನೀತಿ ನಿರ್ಧಾರಗಳ ಅಗತ್ಯವಿದ್ದಲ್ಲಿ, ಪೂರ್ವಾನುಮತಿಯನ್ನು ಏಕರೂಪವಾಗಿ ಪಡೆಯಬೇಕು" ಎಂದು ನಿರ್ದೇಶಿಸಿರುವ ಹಿನ್ನೆಲೆಯಲ್ಲಿ, ದಿನಾಂಕ: 09-12-2022ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ದಿನಾಂಕ: 20-10-2022ರಂದು ಜರುಗಿದ "ಏಳನೇ ಸಾಮಾನ್ಯ ಸಿಂಡಿಕೇಟ್ ಸಭೆ" ಹಾಗೂ ದಿನಾಂಕ: 05-11-2022ರಂದು ಜರುಗಿದ "ಸಿಂಡಿಕೇಟಿನ ವಿಶೇಷ ಸಭೆ"ಗಳ ನಡವಳಿಗಳಲ್ಲಿ ತೀರ್ಮಾನಿಸಲಾಗಿರುವ **ಪ್ರಮುಖ ನೀತಿ ನಿರ್ಧಾರಗಳನ್ನು** ಹೊರತುಪಡಿಸಿ, ಉಳಿದ ನಡವಳಿಗಳನ್ನು ಅನುಮೋದನೆ ಮಾಡಬಹುದೆಂದು ನಿರ್ಣಯಿಸಲಾಗಿರುತ್ತದೆ. |

| | |
|---|---|
| | ~~ಈ ಸಂಬಂಧ ಸದರಿ ಸಿಂಡಿಕೇಟ್ ಸಭೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು.~~ |
| ತೀರ್ಮಾನ | ಅತಿಥಿ ಉಪನ್ಯಾಸಕರ ವೇತನಕ್ಕೆ ಸಂಬಂಧಿಸಿದಂತೆ ಹಣಕಾಸು ಸಮಿತಿಯ ಸಭೆಯಲ್ಲಿ ಸರ್ಕಾರದ ಪ್ರತಿನಿಧಿಗಳು ವೇತನ ಹೆಚ್ಚಳದ ಪ್ರಸ್ತಾವನೆಯನ್ನು ಒಪ್ಪದೆ ಇರುವುದರಿಂದ, 2023-24ನೇ ಸಾಲಿನ ವಿಶ್ವವಿದ್ಯಾನಿಲಯದ ಆಯವ್ಯಯದಲ್ಲಿ ಈ ಸಂಬಂಧ ಅವಕಾಶವನ್ನು ಮಾಡಿಕೊಂಡು ನಂತರ ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆದು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.<br>ತಾತ್ಕಾಲಿಕ ಅಧ್ಯಾಪಕೇತರ ನೌಕರರುಗಳ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ, ದಿನಾಂಕ : 11-01-2023ರಲ್ಲಿ ನಡೆದ ಹಣಕಾಸು ಸಮಿತಿ ಸಭೆಯಲ್ಲಿ ತಡೆಹಿಡಿದಿರುವುದರಿಂದ ಈ ವಿಷಯದ ಸಂಬಂಧ ಮುಂದಿನ ದಿನಗಳಲ್ಲಿ ಸೂಕ್ತ ಕ್ರಮಕೈಗೊಳ್ಳಲಾಗುವುದು. |
| ಸಾಮಾನ್ಯ ಸಭೆ 2023/1.17 | ದಿನಾಂಕ: 12-08-2022ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 2022-23ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ ಸಭೆಯ ನಡವಳಿ, ವಿ.ವಿ. ಸ್ನಾತಕೋತ್ತರ ವಿದ್ಯಾರ್ಥಿನಿಲಯಕ್ಕೆ ಪಾವತಿ ಮಾಡಿರುವ ಪ್ರವೇಶಾತಿ ಮೊತ್ತವನ್ನು ಬೇರೊಂದು ವಿದ್ಯಾರ್ಥಿನಿಲಯಕ್ಕೆ ವರ್ಗಾವಣೆ ಮಾಡಲು ಹಾಗೂ ವಿದ್ಯಾರ್ಥಿಗಳ ಪ್ರವೇಶಾತಿ ಮೊತ್ತವನ್ನು ಮರುಪಾವತಿ ಬಗ್ಗೆ. |
| ತೀರ್ಮಾನ | ದಿನಾಂಕ: 12-08-2022ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 2022-23ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ ಸಭೆಯ ನಡವಳಿ, ವಿ.ವಿ. ಸ್ನಾತಕೋತ್ತರ ವಿದ್ಯಾರ್ಥಿನಿಲಯಕ್ಕೆ ಪಾವತಿ ಮಾಡಿರುವ ಪ್ರವೇಶಾತಿ ಮೊತ್ತವನ್ನು ಬೇರೊಂದು ವಿದ್ಯಾರ್ಥಿನಿಲಯಕ್ಕೆ ವರ್ಗಾವಣೆ ಮಾಡಲು ಹಾಗೂ ವಿದ್ಯಾರ್ಥಿಗಳ ಪ್ರವೇಶಾತಿ ಮೊತ್ತವನ್ನು ಮರುಪಾವತಿ ಮಾಡುವುದಕ್ಕೆ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2023/1.18 | 2023ರ ಏಪ್ರಿಲ್ ಮಾಹೆಯಲ್ಲಿ ಕುಲಸಚಿವರು ತಮ್ಮ ಕುಟುಂಬದೊಂದಿಗೆ ವಿದೇಶ ಪ್ರವಾಸ ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ಶ್ರೀಮತಿ ವಿ.ಆರ್.ಶೈಲಜ, **ಕೆ.ಎ.ಎಸ್.(ಆಯ್ಕೆ ಶ್ರೇಣಿ)**, ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ವಿಶ್ವವಿದ್ಯಾನಿಲಯಕ್ಕೆ ಯಾವುದೇ ರೀತಿಯ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ದಿನಾಂಕ: 13-04-2023 ರಿಂದ 19-04-2023 ರವರೆಗೆ (ಒಟ್ಟು 07 ದಿನಗಳು) ಅವರ ಹಕ್ಕಿನಲ್ಲಿರುವ ಪರಿವರ್ತಿತ ರಜೆಯನ್ನು ಉಪಯೋಗಿಸಿಕೊಂಡು United Arab Emirates (UAE) ದೇಶಕ್ಕೆ ಹೋಗಿಬರಲು ಹಾಗೂ ಕೇಂದ್ರ ಸ್ಥಾನವನ್ನು ಬಿಡಲು ಸಭೆಯು ಅನುಮತಿಸಿತು. |
| ಸಾಮಾನ್ಯ ಸಭೆ 2023/1.19 | **ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪಿಹೆಚ್.ಡಿ. ಸಂಶೋಧಕರಿಗೆ ಶಿಷ್ಯವೇತನ ನೀಡುವ ಬಗ್ಗೆ.** |
| (1) | 2022-23ನೇ ಹಣಕಾಸು ವರ್ಷದಲ್ಲಿ ಶಿಷ್ಯವೇತನವನ್ನು ಹಂಚಿಕೆ ಮಾಡುವ ಬಗ್ಗೆ. |
| | ಕುಲಸಚಿವರು ಮಾತನಾಡಿ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸಂಶೋಧನಾ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಶಿಷ್ಯವೇತನವನ್ನು ನೀಡುತ್ತಿದ್ದೇವೆ. ಪ್ರಸ್ತುತ ಕರ್ನಾಟಕ ಸರ್ಕಾರ SCSP-TSP ಇಲಾಖೆಯ ಸೂಚನಾ ಪತ್ರದ ಸಂಖ್ಯೆ ಸಕಇ/SCSP-TSP ಕೋಶ/ಉನ್ನತ ಶಿಕ್ಷಣ/2022-23 ದಿನಾಂಕ:14-06-2022 ರಂತೆ ಪಿಹೆಚ್.ಡಿ ಸಂಶೋಧಕರಿಗೆ ಶಿಷ್ಯವೇತನ ನೀಡಲು ಆರ್ಥಿಕ ಇಲಾಖೆಗೆ ದಿನಾಂಕ 18-06-2022 ರಂದು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಪರಿಶಿಷ್ಠ ಜಾತಿಯ 244 ಮತ್ತು ಪರಿಶಿಷ್ಟ ಪಂಗಡದ 13 ಸೇರಿದಂತೆ ಒಟ್ಟು 257 ಸಂಶೋಧಕರಿದ್ದಾರೆ ಎಂದು ವಿಶ್ವವಿದ್ಯಾನಿಲಯದ ವತಿಯಿಂದ ಪ್ರಸ್ತಾವನೆ ಸಲ್ಲಿಸಲಾಗಿ ಸರ್ಕಾರದ ಆದೇಶ ಸಂಖ್ಯೆ ಸಕಇ 652 ಎಸ್‌ಎಲ್‌ಪಿ 2022 ಬೆಂಗಳೂರು ದಿನಾಂಕ: 5-11-2022 ರಂತೆ ಮಾಹೆಯಾನ (ಶಿಷ್ಯವೇತನ ಇರುವುದರಿಂದ) ಹತ್ತು ತಿಂಗಳಿಗೆ ರೂ. 257 ಲಕ್ಷಗಳನ್ನು ಮಂಜೂರು ಮಾಡಿರುತ್ತಾರೆ.<br>ಮಾನ್ಯ ಕುಲಪತಿಗಳು ಮಾತನಾಡಿ, 2022-23ನೇ ಸಾಲಿಗೆ ಮಾಹೆಯಾನ ರೂ.10,000/- |

| | |
|---|---|
| | ಗಳನ್ನು ನೀಡಬೇಕೆಂದು ಸರ್ಕಾರದ ಪತ್ರದಲ್ಲಿ ತಿಳಿಸಿರುತ್ತಾರೆ. ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ಕೈಗೊಂಡಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯವು ರೂ.23,200/-ಗಳನ್ನು ನೀಡುತ್ತಿದೆ. ಇದರೊಂದಿಗೆ ಸರ್ಕಾರದಿಂದ ಮಂಜೂರಾಗಿರುವ ಹಣದಲ್ಲಿ ರೂ.10,000/-ಗಳನ್ನು ಒಂದು ಬಾರಿಗೆ ಅನ್ವಯವಾಗುವಂತೆ ಹೆಚ್ಚುವರಿಯಾಗಿ ನೀಡಬೇಕಾಗಿರುತ್ತದೆ ಎಂದು ತಿಳಿಸಿದರು.<br><br>ಡಾ. ಚೈತ್ರ ನಾರಾಯಣ ಮತ್ತು ಡಾ. ಜಿ.ವೆಂಕಟೇಶ್‌ಕುಮಾರ್ ಅವರುಗಳು ಮಾತನಾಡಿ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವಂತೆ ಸರ್ಕಾರದಿಂದ ಮಂಜೂರಾಗಿರುವ ಮೊತ್ತದಲ್ಲಿ ಪಾವತಿಸಲು ತಿಳಿಸಿದರು.<br>ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀಮತಿ ವೈ.ಕೆ.ಪವಿತ್ರ ಅವರು ಈಗಾಗಲೇ ವಿಶ್ವವಿದ್ಯಾನಿಲಯದ ವತಿಯಿಂದ ನೀಡಲಾಗುತ್ತಿರುವ ರೂ.23,200/-ಗಳ ಜೊತೆ ರೂ.10,000/-ಗಳನ್ನು ನೀಡಬೇಕೆ? ಹಾಗಾದ್ದಲ್ಲಿ ಇಷ್ಟು ಮೊತ್ತದ ಹಣವು ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವವರಿಗಿಂತ ಹೆಚ್ಚಾಗುವುದಿಲ್ಲವೇ ಎಂದು ತಿಳಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2019ನೇ ಸಾಲಿನಲ್ಲಿ ಪಿಹೆಚ್.ಡಿ ಸಂಶೋಧಕರುಗಳಿಗೆ ಶಿಷ್ಯವೇತನ ಪರಿಷ್ಕರಿಸುವ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ರೂ.10,000/-ಗಳನ್ನು ಮತ್ತು ಸರ್ಕಾರದ ವತಿಯಿಂದ ರೂ.10,000/-ಗಳನ್ನು ಅಂದರೆ ಒಟ್ಟು 20,000/-ಗಳಂತೆ ಶಿಷ್ಯವೇತನ ನೀಡಲು ನಿರ್ಧರಿಸಲಾಯಿತು. ಈ ನಿರ್ಧಾರವನ್ನು ಅವಲೋಕಿಸಿದಾಗ ಪಿಹೆಚ್.ಡಿ ಸಂಶೋಧಕರುಗಳ ಹಿತದೃಷ್ಟಿಯಿಂದ ಮೈಸೂರು ವಿಶ್ವವಿದ್ಯಾನಿಲಯವು ಸರ್ಕಾರದ ವತಿಯಿಂದ ನೀಡಬೇಕಾದ ರೂ.10,000/-ಗಳನ್ನು ಮುಂಗಡವಾಗಿ ಪಾವತಿಸಲಾಗಿದ್ದು, ಪ್ರಸ್ತುತ ಸಮಾಜ ಕಲ್ಯಾಣ ಇಲಾಖೆಯು ಬಿಡುಗಡೆ ಮಾಡಿರುವ ಅನುದಾನವನ್ನು ವಿಶ್ವವಿದ್ಯಾನಿಲಯದ Book of Accounts ಗೆ ಹೊಂದಾಣಿಕೆ ಮಾಡಿಕೊಳ್ಳಬೇಕಾಗಿರುತ್ತದೆ. ಈ ಬಗ್ಗೆ ಸರ್ಕಾರಕ್ಕೆ ಸೂಕ್ತ ಸ್ಪಷ್ಟೀಕರಣ ನೀಡಬೇಕೆಂದು ಪತ್ರ ಬರೆಯಲಾಗಿದೆ. ಆದರೆ, ಇದುವರೆವಿಗೂ ಸರ್ಕಾರದಿಂದ ಯಾವುದೇ ನಿರ್ದೇಶನ ಬಂದಿರುವುದಿಲ್ಲವೆಂದು ತಿಳಿಸುತ್ತಾ, ಮುಂದಿನ ದಿನಗಳಲ್ಲಿ ರೂ.257 ಲಕ್ಷಗಳ ಹಂಚಿಕೆಯ ಬಗ್ಗೆ ಆಡಿಟ್ ಆಕ್ಷೇಪಣೆಯಾದ್ದಲ್ಲಿ, ಪ್ರಸ್ತುತ ಸಮಾಜ ಕಲ್ಯಾಣ ಇಲಾಖೆಯ ಅನುದಾನದಿಂದ ಪಡೆಯುವ ಶಿಷ್ಯವೇತನದಲ್ಲಿ ವಿಶ್ವವಿದ್ಯಾನಿಲಯವು ಕಟಾವು ಮಾಡಿಕೊಳ್ಳಬಹುದೆಂದು ತಿಳಿಸುತ್ತಾ, ಮುಚ್ಚಳಿಕೆ ಪಡೆದು ಬಳಿಕ ಹಂಚಿಕೆ ಮಾಡುವುದು ಸೂಕ್ತವೆಂದು ತಿಳಿಸಿದರು. |
| **ತೀರ್ಮಾನ** | ಸರ್ಕಾರದ ಆದೇಶ ಸಂಖ್ಯೆ: ಸ.ಕ.ಇ 652 ಎಸ್‌ಎಲ್‌ಸಿ 2022 ಬೆಂಗಳೂರು, ದಿನಾಂಕ: 05-11-2022 ರನ್ವಯ ಸಮಾಜ ಕಲ್ಯಾಣ ಇಲಾಖೆಯು ಮೈಸೂರು ವಿಶ್ವವಿದ್ಯಾನಿಲಯದ 227 ಪರಿಶಿಷ್ಟ ಜಾತಿ ಮತ್ತು 16 ಪರಿಶಿಷ್ಟ ಪಂಗಡದ (ಒಟ್ಟು 243) ಪಿಹೆಚ್.ಡಿ ಸಂಶೋಧಕರಿಗೆ ಹತ್ತು ತಿಂಗಳಿಗೆ 2022-23ನೇ ಸಾಲಿಗೆ ಸೀಮಿತಗೊಳಿಸಿ ರೂ.257 ಲಕ್ಷಗಳನ್ನು ಮಂಜೂರು ಮಾಡಿರುವುದನ್ನು ಇದೊಂದು ಬಾರಿಗೆ ಮಾತ್ರ ಸೂಕ್ತ ಮುಚ್ಚಳಿಕೆಯನ್ನು ಪಡೆದುಕೊಂಡು ಸಂಶೋಧನಾ ಕಾರ್ಯ ನಿರ್ವಹಿಸಿದ ಅವಧಿಗೆ ಅನುಪಾತದಲ್ಲಿ (Ratio) ಹಂಚಿಕೆ ಮಾಡಲು ಹಾಗೂ ಒಂದು ವೇಳೆ ಅನುಸೂಚಿತ ಜಾತಿ/ಅನುಸೂಚಿತ ಪಂಗಡದ ಪಿಹೆಚ್.ಡಿ ಸಂಶೋಧಕರುಗಳಿಗೆ 2023-24ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಅನುದಾನ ಬಿಡುಗಡೆ ಮಾಡಿದ್ದಲ್ಲಿ, ವಿಶ್ವವಿದ್ಯಾನಿಲಯವು ಆಂತರಿಕ ಸಂಪನ್ಮೂಲದಿಂದ ಮುಂಗಡವಾಗಿ ಪಾವತಿಸುವ ಶಿಷ್ಯವೇತನಕ್ಕೆ ಎದುರಾಗಿ ಮರುಭರಿಸಿಕೊಳ್ಳುವ ಷರತ್ತಿನೊಂದಿಗೆ ಶಿಷ್ಯವೇತನವನ್ನು ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| (2) | 2020-21ನೇ ಸಾಲಿನಲ್ಲಿ ಆಯ್ಕೆಯಾಗಿರುವ ಸಂಶೋಧಕರಿಗೆ ಹಿಂಬಾಕಿ ಶಿಷ್ಯವೇತನ ನೀಡುವ ಬಗ್ಗೆ. |
| **ತೀರ್ಮಾನ** | ಅನುಮೋದಿಸಿರುವುದಿಲ್ಲ. |

| | |
|---|---|
| (3) | ಪ್ರಸ್ತುತ ಶಿಷ್ಯವೇತನಕ್ಕಾಗಿ ಅರ್ಜಿ ಸಲ್ಲಿಸಿರುವ 16 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವ ಬಗ್ಗೆ. |
| | ಮಾನ್ಯ ಕುಲಸಚಿವರು ಮಾತನಾಡಿ, ಈಗಾಗಲೇ ಹಿಂದಿನ ಮಾನ್ಯ ಕುಲಪತಿಗಳ ಹಾಗೂ ಹಾಲಿ ಕುಲಪತಿಗಳ ಅವಧಿಯಲ್ಲಿ 2022ರ ಕ್ಯಾಲೆಂಡರ್ ವರ್ಷದ ಅಂತ್ಯದೊಳಗಡೆ ಆಗಿರುವ ಅನುಮೋದನೆಗಳಂತೆ 16 ಮಂದಿ ಅಭ್ಯರ್ಥಿಗಳಿಗೆ ಶಿಷ್ಯವೇತನವನ್ನು ಪಾವತಿಸಲು ಕಡತದಲ್ಲಿ ಅನುಮೋದಿಸಿರುವ ಹಿನ್ನೆಲೆಯಲ್ಲಿ ಇನ್ನು ಮುಂದೆ ಮೆರಿಟ್ ಆಧಾರದ ಮೇಲೆ ಸಂಖ್ಯೆಯನ್ನು ಸೀಮಿತಗೊಳಿಸಿ ವಾರ್ಷಿಕವಾಗಿ 20 ಅಭ್ಯರ್ಥಿಗಳಿಗೆ ಮಾತ್ರ ಶಿಷ್ಯವೇತನ ನೀಡುವುದು ಸೂಕ್ತವೆಂದು ಅಭಿಪ್ರಾಯಿಸಿದರು. |
| ತೀರ್ಮಾನ | ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಈಗಾಗಲೇ ಹಿಂದಿನ ಮಾನ್ಯ ಕುಲಪತಿಗಳ ಹಾಗೂ ಹಾಲಿ ಕುಲಪತಿಗಳ ಅವಧಿಯಲ್ಲಿ 2022ರ ಕ್ಯಾಲೆಂಡರ್ ವರ್ಷದ ಅಂತ್ಯದೊಳಗಡೆ ಆಗಿರುವ ಅನುಮೋದನೆಗಳಂತೆ 16 ಮಂದಿ ಅಭ್ಯರ್ಥಿಗಳಿಗೆ ಶಿಷ್ಯವೇತನವನ್ನು ಪಾವತಿಸಲು ಕಡತದಲ್ಲಿ ಅನುಮೋದಿಸಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಶಿಷ್ಯವೇತನ ನೀಡುವ ಸಂಬಂಧ ಆದೇಶವನ್ನು ಹೊರಡಿಸಲು ನಿರ್ಣಯಿಸಲಾಯಿತು. |
| (4) | ಮುಂದಿನ ಸಾಲಿನಿಂದ ಶಿಷ್ಯವೇತನಕ್ಕಾಗಿ ಅರ್ಜಿ ಸಲ್ಲಿಸುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸಂಶೋಧನಾ ವಿದ್ಯಾರ್ಥಿಗಳಿಗೆ ಈ ಹಿಂದೆ ಅನುಸರಿಸುತ್ತಿದ್ದ ಕ್ರಮವನ್ನೇ ಮುಂದುವರೆಸುವ ಬಗ್ಗೆ. |
| ತೀರ್ಮಾನ | ಪ್ರಸಕ್ತ ಕ್ಯಾಲೆಂಡರ್ ವರ್ಷದಿಂದ (ಜನವರಿಯಿಂದ ಡಿಸೆಂಬರ್‌ವರೆಗೆ) ಶಿಷ್ಯವೇತನಕ್ಕಾಗಿ ಅರ್ಜಿ ಸಲ್ಲಿಸುವ ಅರ್ಹ ಅಭ್ಯರ್ಥಿಗಳ ಪೈಕಿ 20 ಅಭ್ಯರ್ಥಿಗಳಿಗೆ ಮಾತ್ರ ಮೆರಿಟ್ ಆಧಾರದ ಮೇಲೆ ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಶಿಷ್ಯವೇತನಕ್ಕಾಗಿ ಆಯ್ಕೆ ಮಾಡಲು ಸಭೆಯಲ್ಲಿ ನಿರ್ಣಯಿಸಲಾಯಿತು. |
| ಸಾಮಾನ್ಯ ಸಭೆ 2023/1.20 | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸುಗಳು. |
| ತೀರ್ಮಾನ | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಹಾಗೂ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ, ದಿನಾಂಕ: 22-12-2022ರಂದು ನಡೆದ ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸುಗಳಿಗೆ ವಿಶ್ವವಿದ್ಯಾನಿಲಯವು ತೆಗೆದುಕೊಂಡಿರುವ ಕ್ರಮವನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2023/1.21 | ವಿಶ್ವವಿದ್ಯಾನಿಲಯದ ಆರ್-2 ವಸತಿ ಗೃಹವನ್ನು ಡಾ. ರಕ್ಷಾ ಕೆ.ಆರ್., ಸಹಾಯಕ ಪ್ರಾಧ್ಯಾಪಕರು (ತಾತ್ಕಾಲಿಕ), ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ ಇವರಿಗೆ ಹಂಚಿಕೆ ಮಾಡುವ ಬಗ್ಗೆ. |
| ತೀರ್ಮಾನ | **ದಿನಾಂಕ: 05-04-2022ರಂದು ನಡೆದ ಸಿಂಡಿಕೇಟ್ ಉಪ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಹಾಗೂ ನಿಗದಿಪಡಿಸಿರುವ ಬಾಡಿಗೆ ಶುಲ್ಕವನ್ನು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ/ತಾತ್ಕಾಲಿಕ ಅಧ್ಯಾಪಕ/ಅಧ್ಯಾಪಕೇತರ ಉದ್ಯೋಗಿಗಳಿಗೆ ಕಡ್ಡಾಯವಾಗಿ ಅಳವಡಿಸಲು ಸಭೆಯು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ತೀರ್ಮಾನಗಳನ್ನು ಸಭೆಯಲ್ಲಿ ತೆಗೆದುಕೊಳ್ಳಲಾಯಿತು.**<br>* ವಿಶ್ವವಿದ್ಯಾನಿಲಯದ ಆರ್-2 ವಸತಿ ಗೃಹವನ್ನು ಡಾ. ರಕ್ಷಾ ಕೆ.ಆರ್., ಸಹಾಯಕ ಪ್ರಾಧ್ಯಾಪಕರು (ತಾತ್ಕಾಲಿಕ), ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ ಇವರಿಗೆ ರೂ.21,024/-ಗಳಿಗೆ ನಿಗದಿಪಡಿಸಿ ಹಂಚಿಕೆ ಮಾಡಲು;<br>* ಇನ್ನು ಮುಂದೆ ಖಾಲಿ ಇರುವ ವಸತಿಗೃಹವನ್ನು ಖಾಯಂ ಅಧ್ಯಾಪಕ/ಅಧ್ಯಾಪಕೇತರ ಉದ್ಯೋಗಿಗಳಿಗೆ ಸೇವಾ ಹಿರಿತನ ಆಧಾರದ ಮೇಲೆ ಹಂಚಿಕೆ ಮಾಡುವ ವಿವೇಚಾನುಸಾರ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.<br>* ತಾತ್ಕಾಲಿಕ ಅಧ್ಯಾಪಕ/ಅಧ್ಯಾಪಕೇತರ ಉದ್ಯೋಗಿಗಳಿಗೆ ವಸತಿಗೃಹವನ್ನು ಹಂಚಿಕೆ ಮಾಡುವುದನ್ನು ಈಗಾಗಲೇ ರಚಿಸಲಾಗಿರುವ ಸಿಂಡಿಕೇಟ್ ಉಪ ಸಮಿತಿಗೆ ವಹಿಸುವುದು. |

| | |
|---|---|
| ಸಾಮಾನ್ಯ ಸಭೆ 2023/1.22 | ಡಾ. ಬಾಬು ಜಗಜೀವನರಾಮ್ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |
| ತೀರ್ಮಾನ | ಡಾ. ಬಾಬು ಜಗಜೀವನರಾಮ್ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಸಂಬಂಧ ವಿವೇಚಾನುಸಾರ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2023/1.23 | ವಿವಿಧ ಪರೀಕ್ಷಾ ಕಾರ್ಯಗಳಲ್ಲಿ ಭಾಗವಹಿಸುವ ಅಧ್ಯಾಪಕರುಗಳು/ ಅಧಿಕಾರಿ/ ಸಿಬ್ಬಂದಿ ವರ್ಗದವರಿಗೆ ಭತ್ಯೆಗಳು/ಸಂಭಾವನೆ ನೀಡುವ ಕುರಿತು. |
| | ಕುಲಸಚಿವರು (ಪರೀಕ್ಷಾಂಗ) ಅವರು ಮಾತನಾಡಿ, ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1) ಬೆಂಗಳೂರು ಇವರ ಪತ್ರ ಸಂಖ್ಯೆ: ಇಡಿ 78 ಯುಎಂವಿ 2022, ದಿನಾಂಕ: 12-12-2-22ರ ಪತ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ನಿಯಮಬಾಹಿರ ಟಿಎ/ಡಿಎ ಸಂಭಾವನೆ ನೀಡುವಲ್ಲಿ ಭಾಗಿಯಾಗಿರುವ ಎಲ್ಲಾ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮಕೈಗೊಳ್ಳತಕ್ಕದ್ದು ಮತ್ತು ತಕ್ಷಣವೇ ವಿತರಿಸಿದ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳ ವೇತನದಲ್ಲಿ ವಸೂಲಾತಿಯನ್ನು ಪ್ರಾರಂಭಿಸಿ, 06 ತಿಂಗಳೊಳಗಾಗಿ ವಸೂಲಾತಿಯನ್ನು ಪೂರ್ಣಗೊಳಿಸಬೇಕು. ಕೈಗೊಂಡ ಕ್ರಮದ ಕುರಿತು 15 ದಿನಗಳೊಳಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕೆಂದು ನಿರ್ದೇಶಿಸಿರುತ್ತಾರೆ. ಈ ಸಂಬಂಧ ಕೆಲವು ವಿಶ್ವವಿದ್ಯಾನಿಲಯಗಳು ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿಚಾರಿಸಲಾಗಿ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಾತ್ರ ಸರ್ಕಾರದಿಂದ ನಿರ್ದೇಶನ ಬಂದಿರುತ್ತದೆ. ಆದರೆ, ಮೈಸೂರು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಪರೀಕ್ಷಾ ಕಾರ್ಯಗಳು 2 ಬಾರಿ (Odd & Even Semester) ನಡೆಸುತ್ತಿದ್ದು, ಒಂದು ಬಾರಿ ಪರೀಕ್ಷೆಯು 30 ರಿಂದ 45 ದಿನಗಳವರೆಗೆ ನಡೆಯುತ್ತದೆ. ಈ ಅವಧಿಯಲ್ಲಿ ಅಧ್ಯಾಪಕರುಗಳು/ ಅಧಿಕಾರಿಗಳು/ಸಿಬ್ಬಂದಿ ವರ್ಗದವರು ನಿಗದಿತ ಕಛೇರಿ ವೇಳೆಗಿಂತ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಾರೆ (ಅಂದರೆ ಬೆಳಗ್ಗೆ 5.30 ರಿಂದ ಸಂಜೆ 9.00 ರವರೆಗೆ). ಸಿಬ್ಬಂದಿಗಳು ಪ್ರತಿ ದಿನ ಪ್ರಶ್ನೆಪತ್ರಿಕೆ ವಿತರಿಸಲು ಹಾಗೂ ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕಾಗಿರುತ್ತದೆ (ಮೈಸೂರು ಜಿಲ್ಲೆಯ ಕಾಲೇಜುಗಳಲ್ಲದೆ, ಹಾಸನ, ಮಂಡ್ಯ ಮತ್ತು ಚಾಮರಾಜನಗರ ಸ್ನಾತಕೋತ್ತರ ಕೇಂದ್ರದ ವ್ಯಾಪ್ತಿಗೊಳಪಡುವ ಕಾಲೇಜುಗಳು). ಆದುದರಿಂದ, ವಿವಿಧ ಪರೀಕ್ಷಾ ಕಾರ್ಯಗಳಲ್ಲಿ ಭಾಗವಹಿಸುವ ಅಧ್ಯಾಪಕರುಗಳು/ಅಧಿಕಾರಿಗಳು/ಸಿಬ್ಬಂದಿವರ್ಗದವರಿಗೆ ವಿಶ್ವವಿದ್ಯಾನಿಲಯವು ಭತ್ಯೆ/ ಸಂಭಾವನೆಯನ್ನು ನೀಡಬೇಕೆಂದರು. |
| ತೀರ್ಮಾನ | ಸರ್ಕಾರದ ನಿರ್ದೇಶನ ಹಾಗೂ ಕುಲಸಚಿವ (ಪರೀಕ್ಷಾಂಗ)ರವರು ಸಭೆಯಲ್ಲಿ ಪ್ರಸ್ತಾಪಿಸಲಾದ ವಿವರಗಳನ್ನು ಪರಾಮರ್ಶಿಸಿದ ಸಭೆಯು ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958ರ ನಿಯಮ 28(ಬಿ) ಪ್ರಕಾರ ಯಾವುದೇ ನೌಕರ ಕಛೇರಿ ವೇಳೆಯನ್ನು ಹೊರತುಪಡಿಸಿ ಮಾಡುವ ಕಾರ್ಯಕ್ಕೆ ನಿರ್ಣಯದನುಸಾರ ವಿವಿಧ ಪರೀಕ್ಷಾ ಕಾರ್ಯಗಳಲ್ಲಿ ಭಾಗವಹಿಸುವ ಅಧ್ಯಾಪಕರುಗಳು/ ಅಧಿಕಾರಿ/ ಸಿಬ್ಬಂದಿ ವರ್ಗದವರಿಗೆ ಭತ್ಯೆಗಳು/ಸಂಭಾವನೆ ಪಾವತಿಸಲು ಸಭೆಯಲ್ಲಿ ಒಪ್ಪಲಾಯಿತು ಹಾಗೂ ಈ ಸಂಬಂಧ ಕುಲಸಚಿವರು (ಪರೀಕ್ಷಾಂಗ)ರವರು ಸರ್ಕಾರಕ್ಕೆ ಪತ್ರ ಬರೆದು ಅನುಮೋದನೆ ಪಡೆಯುವುದು. ಸರ್ಕಾರದಿಂದ ಅನುಮೋದನೆ ಪಡೆದ ನಂತರವೇ ಪರೀಕ್ಷಾ ಕಾರ್ಯಗಳಲ್ಲಿ ಭಾಗವಹಿಸುವ ಅಧ್ಯಾಪಕರುಗಳು/ಅಧಿಕಾರಿಗಳು/ಸಿಬ್ಬಂದಿವರ್ಗದವರಿಗೆ ವಿಶ್ವವಿದ್ಯಾನಿಲಯದ ವತಿಯಿಂದ ಭತ್ಯೆ/ ಸಂಭಾವನೆಯನ್ನು ನೀಡಲು ಸಭೆಯಲ್ಲಿ ನಿರ್ಧರಿಸಲಾಯಿತು. |
| ಸಾಮಾನ್ಯ ಸಭೆ 2023/1.24 | ಶ್ರೀ ಎಂ.ಬಿ. ಗಪ್ಪಣ್ಣ, ಮಾನ್ಯ ಸಿಂಡಿಕೇಟ್ ಸದಸ್ಯರು, ಮೈವಿವಿ, ಮೈಸೂರು ಇವರು ಕೋರಿರುವ ಮಾಹಿತಿಗಳ ಬಗ್ಗೆ. |
| ತೀರ್ಮಾನ | ಶ್ರೀ ಎಂ.ಬಿ. ಗಪ್ಪಣ್ಣ, ಮಾನ್ಯ ಸಿಂಡಿಕೇಟ್ ಸದಸ್ಯರು, ಮೈವಿ ವಿ, ಮೈಸೂರು ಇವರು ಕೋರಿರುವ ಮಾಹಿತಿಗಳನ್ನು ಸಭೆಯಲ್ಲಿ ಗಮನಿಸಲಾಯಿತು. |

| | |
|---|---|
| ಸಾಮಾನ್ಯ ಸಭೆ 2023/1.25 | ಶ್ರೀ ಗಣೇಶ್, ಆರ್, ದ್ವಿತೀಯ ದರ್ಜೆ ಸಹಾಯಕ, ಮಹಾರಾಜ ಕಾಲೇಜು, ಮೈಸೂರು ಇವರು ಸ್ವಯಂ ನಿವೃತ್ತಿ ಪಡೆಯಲು ಅನುಮತಿ ನೀಡುವ ಬಗ್ಗೆ. |
| | ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ಶ್ರೀ ಗಣೇಶ್, ಆರ್, ದ್ವಿತೀಯ ದರ್ಜೆ ಸಹಾಯಕ, ಮಹಾರಾಜ ಕಾಲೇಜು, ಮೈಸೂರು ಇವರು ಹಲವಾರು ಬಾರಿ ಪೂರ್ವಾನುಮತಿ ಪಡೆಯದೇ ಕಛೇರಿ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿರುತ್ತಾರೆ. ಆದುದರಿಂದ, ಶ್ರೀ ಗಣೇಶ್.ಆರ್ ಅವರಿಗೆ ಸ್ವಯಂ ನಿವೃತ್ತಿ ಬದಲು ಕಡ್ಡಾಯ ನಿವೃತ್ತಿ ಹೊಂದಲು ಮಾತ್ರ ಅನುಮತಿ ನೀಡಬೇಕೆಂದರು. |
| ತೀರ್ಮಾನ | ಶ್ರೀ ಗಣೇಶ್, ಆರ್, ದ್ವಿತೀಯ ದರ್ಜೆ ಸಹಾಯಕ, ಮಹಾರಾಜ ಕಾಲೇಜು, ಮೈಸೂರು ಇವರು ಸ್ವಯಂ ನಿವೃತ್ತಿ ಸಂಬಂಧ ಚರ್ಚಿಸಿದ ಸಭೆಯು ಮಾನ್ಯ ಕುಲಪತಿಗಳಿಗೆ ವಿವೇಚಾನುಸಾರ ಅಧಿಕಾರವನ್ನು ತೆಗೆದುಕೊಳ್ಳಲು ನಿರ್ಣಯಿಸಲಾಯಿತು. |
| ಸಾಮಾನ್ಯ ಸಭೆ 2023/1.26 | 2022-23ನೇ ಸಾಲಿನಲ್ಲಿ ಆಯವ್ಯಯ ಅಂದಾಜಿನಲ್ಲಿ ಐ.ಡಿ.ಎಫ್., ಸಹೋದ್ಯಮ ಕೋರ್ಸ್, ಐಐಡಿಎಫ್ ಹಾಗೂ ಜಿ.ಆರ್.ಎ. (135/136) ಖಾತೆಗಳಿಂದ ಹುಂಡಿಗಳನ್ನು ಪಾವತಿಸಿರುವ ಹಾಗೂ ಪಾವತಿಸಬೇಕಾಗಿರುವ ಬಗ್ಗೆ. |
| ತೀರ್ಮಾನ | 2022-23ನೇ ಸಾಲಿನಲ್ಲಿ ಆಯವ್ಯಯ ಅಂದಾಜಿನಲ್ಲಿ ಐ.ಡಿ.ಎಫ್., ಸಹೋದ್ಯಮ ಕೋರ್ಸ್ ಐಐಡಿಎಫ್ ಹಾಗೂ ಜಿ.ಆರ್.ಎ. (135/136) ಖಾತೆಗಳಿಂದ ಕಾಮಗಾರಿ ಹಾಗೂ ಇತರೆ ಹುಂಡಿಗಳಿಗೆ ಈ ಕೆಳಕಂಡಂತೆ ಒಟ್ಟು ರೂ. 3,44,82,020=00 ಗಳನ್ನು ಪಾವತಿಸಿರುವುದಕ್ಕೆ ಸಭೆಯು ಒಪ್ಪಿ ಅನುಸಮರ್ಥಿಸಿತು. |

| Sl No. | Name of the Account | Account No | Amount (in Rs.) |
|---|---|---|---|
| 1 | GRA (Minor work Bills 135/136) | 54007591471 | 69,57,176=00 |
| 2 | Infrastructure Development Fund | 54007591324 | 1,31,05,474=00 |
| 3 | InformationInfrastructure Development Fund | 54007592714 | 70,31,924=00 |
| 4 | Collaboration Course | 54007592690 | 73,87,450=00 |
| | | **Total Rs.** | **3,44,82,020=00** |

ಹಾಗೂ ಪ್ರಾಥಮಿಕವಾಗಿ ರೂ.5.00 ಲಕ್ಷದೊಳಗಿರುವ ಹುಂಡಿಗಳನ್ನು ಪಾವತಿಸಲು, ನಂತರ ಇತರೆ ಹುಂಡಿಗಳನ್ನು ಆದ್ಯತೆಯ ಆಧಾರದಲ್ಲಿ ಹಣದ ಲಭ್ಯತೆಯನ್ನು ನೋಡಿಕೊಂಡು ಪಾವತಿಸಲು ತೀರ್ಮಾನಿಸಲಾಯಿತು.

| | |
|---|---|
| ಸಾಮಾನ್ಯ ಸಭೆ 2023/1.27 | ವಿಶ್ವವಿದ್ಯಾನಿಲಯದಲ್ಲಿ "ಪ್ರೊ. ಜಿ. ಹೇಮಂತ ಕುಮಾರ್ ಚಿನ್ನದ ಪದಕ", ಪ್ರೊ. ಸರೋಜ ರಾಮಪ್ಪ ಚಿನ್ನದ ಪದಕ" ಮತ್ತು "ಶ್ರೀಮತಿ ದಿ. ಕಮಲಮ್ಮ W/o ಶ್ರೀ ಜಿ.ಎ. ಶಿವಲಿಂಗಯ್ಯ ನಗದು ಬಹುಮಾನ" ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 29(ಡಿ) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿಯ ಹಣವನ್ನು ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಎರಡು ಚಿನ್ನದ ಪದಕವನ್ನು ಮತ್ತು ಒಂದು ನಗದು ಬಹುಮಾನವನ್ನು ನೀಡಲು ಈ ಕೆಳಕಂಡ ಮೂರು ದತ್ತಿಗಳನ್ನು ಸ್ಥಾಪಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| ಕ್ರ. ಸಂ. | ದಾನಿಗಳು ಕೋರಿರುವ ದತ್ತಿಯ ಹೆಸರು | ದಾನಿಗಳ ಹೆಸರು ಮತ್ತು ವಿಳಾಸ | ಷರತ್ತುಗಳು | ಪಾವತಿಸಿರುವ ಮೊತ್ತ |
|---|---|---|---|---|
| 01. | "ಪ್ರೊ. ಜಿ.ಹೇಮಂತಕುಮಾರ್ ಚಿನ್ನದ ಪದಕ" | ಪ್ರೊ. ಡಿ.ಎಸ್. ಗುರು ಅಧ್ಯಕ್ಷರು, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು | Bachelor Degree in Computer Science OR Computer Application in First Attempt and Securing Highest Marks | 1,00,000/- |

| | | | | |
|---|---|---|---|---|
| 02. | "ಶ್ರೀಮತಿ ದಿ॥ ಕಮಲಮ್ಮ ಘಂಶ್ರೀ ಜಿ.ಎ.ಶಿವಲಿಂಗಯ್ಯ ನಗದು ಬಹುಮಾನ" | ಶ್ರೀ. ಜಿ.ಎ. ಶಿವಲಿಂಗಯ್ಯ, #370, ಡಿ. ಸುಬ್ಬಯ್ಯರಸ್ತೆ, ಮೈಸೂರು-570024 | B.A. in Kannada in First Attempt and Securing Highest Marks | 1,00,000/- |
| 03 | "ಪ್ರೊ. ಸರೋಜ ರಾಮಪ್ಪ ಚಿನ್ನದ ಪದಕ" | ಪ್ರೊ. ಪಿ. ಜಿ. ರಾಮಪ್ಪ, #107, 2ನೇ ಮುಖ್ಯರಸ್ತೆ, 4ನೇ ಹಂತ, ಟಿ.ಕೆ. ಬಡಾವಣೆ. ಸರಸ್ವತಿಪುರಂ, ಮೈಸೂರು-570009 | B.Sc. in Zoology in First Attempt and Securing Highest Marks | 1,00,000/-<br>5000/- |

| | |
|---|---|
| ಸಾಮಾನ್ಯ ಸಭೆ 2023/1.28 | ರಾಜ್ಯ ಸಿವಿಲ್ ಸೇವೆಗಳಲ್ಲಿನ ನಿರ್ದಿಷ್ಟಪಡಿಸಿದ ಹಂತದವರೆಗಿನ ಹುದ್ದೆಗಳಿಗೆ ಮಾಡುವ ಮುಂಬಡ್ತಿಯಲ್ಲಿ ಭಾರತ ಸಂವಿಧಾನದ ಅನುಚ್ಛೇದ 16(4ಎ)ರನ್ವಯ ಮೀಸಲಾತಿ ಕಲ್ಪಿಸುವ ಬಗ್ಗೆ. |
| ತೀರ್ಮಾನ | ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು-1), ಕರ್ನಾಟಕ ಸರ್ಕಾರ, ಬೆಂಗಳೂರು ಇವರು ಹೊರಡಿಸಿರುವ ಆದೇಶ ಸಂಖ್ಯೆ: ಸಿಆಸುಇ 02 ಸೆಹಿಮ 2022, ಬೆಂಗಳೂರು, ದಿನಾಂಕ: 28-12-2022ರ ಆದೇಶದಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ನಿರ್ದಿಷ್ಟಪಡಿಸಿದ ಹಂತದವರೆಗಿನ ಹುದ್ದೆಗಳಿಗೆ ಮಾಡುವ ಮುಂಬಡ್ತಿಯಲ್ಲಿ ಭಾರತ ಸಂವಿಧಾನದ ಅನುಚ್ಛೇದ 16(4ಎ)ರನ್ವಯ ಪರಿಶಿಷ್ಟ ಜಾತಿ ಶೇ.17 ರಷ್ಟು ಮತ್ತು ಪರಿಶಿಷ್ಟ ಪಂಗಡಗಳಿಗೆ ಶೇ.7 ರಷ್ಟು ಮೀಸಲಾತಿ ಕಲ್ಪಿಸಿರುವ ಆದೇಶವನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2023/1.29 | ಡಾ. ಬಿ.ಹೆಚ್. ಸುರೇಶ್, ನಿವೃತ್ತ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಸಂದರ್ಶಕ ಪ್ರಾಧ್ಯಾಪಕರಾಗಿ ಆಹ್ವಾನಿಸಿರುವ ಬಗೆಗೆ. |
| ತೀರ್ಮಾನ | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಹಾಗೂ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ, ಪ್ರೊ. ಬಿ.ಹೆಚ್.ಸುರೇಶ್, ನಿವೃತ್ತ ಪ್ರಾಧ್ಯಾಪಕರು ಇವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 53(10) ರಲ್ಲಿರುವ ಅವಕಾಶದನುಸಾರ 2022-23ನೇ ಶೈಕ್ಷಣಿಕ ಸಾಲಿನ ಒಂದು ವರ್ಷದ ಅವಧಿಗೆ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಬೋಧನಾಕಾರ್ಯ ನಿರ್ವಹಿಸಲು ಸಂದರ್ಶಕ ಪ್ರಾಧ್ಯಾಪಕರಾಗಿ ಮಾಹೆಯಾನ ರೂ.25,000/-ಗಳ ಗೌರವ ಸಂಭಾವನೆಯೊಂದಿಗೆ ಆಹ್ವಾನಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2023/1.30 | ಶ್ರೀ ಬಸಪ್ಪ ಬಿ., ಸಹಾಯಕ ಗ್ರಂಥಪಾಲಕರು, ಸ್ನಾತಕ ಗ್ರಂಥಾಲಯ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ಇವರು ವಿದೇಶ ಪ್ರವಾಸಕ್ಕೆ ತೆರಳಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ಶ್ರೀ ಬಸಪ್ಪ ಬಿ., ಸಹಾಯಕ ಗ್ರಂಥಪಾಲಕರು, ಸ್ನಾತಕ ಗ್ರಂಥಾಲಯ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ಇವರು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ದಿನಾಂಕ: 03/03/2023 ರಿಂದ 06/03/2023 ರವರೆಗೆ (04 ದಿವಸಗಳು) ಕುಟುಂಬದೊಂದಿಗೆ ಸಿಂಗಾಪುರ್ ಪ್ರವಾಸಕ್ಕೆ ಹೋಗಿಬರಲು ಹಾಗೂ ಕೇಂದ್ರ ಸ್ಥಾನವನ್ನು ಬಿಡಲು ಸಭೆಯು ಅನುಮತಿಸಿತು. |
| ಸಾಮಾನ್ಯ ಸಭೆ 2023/1.31 | 18 ಸಂಶೋಧನಾ ವಿದ್ಯಾರ್ಥಿಗಳು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| ತೀರ್ಮಾನ | ಪಿಹೆಚ್.ಡಿ 2010ರ ನಿಯಮಾವಳಿಯ ಪ್ರಕಾರ ವಿವಿಧ ವಿಷಯಗಳ ಮಾರ್ಗದರ್ಶಕರ ಬಳಿ ಸಂಶೋಧನಾ ಕಾರ್ಯವನ್ನು ನಿರ್ವಹಿಸುತ್ತಿದ್ದ 18 ಸಂಶೋಧನಾ ವಿದ್ಯಾರ್ಥಿಗಳು ದಿನಾಂಕ: 31-12-2022ರೊಳಗೆ ಕಾರಣಾಂತರಗಳಿಂದ ಮಹಾಪ್ರಬಂಧವನ್ನು ಸಲ್ಲಿಸಿರುವುದಿಲ್ಲ. ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಒಂದು ಬಾರಿ ಮಾತ್ರ ದಿನಾಂಕ: 01-01-2023 ರಿಂದ ಅನ್ವಯವಾಗುವಂತೆ ಆರು ತಿಂಗಳು ಕಾಲಾವಕಾಶವನ್ನು ಮಾತ್ರ ವಿಸ್ತರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |

| | |
|---|---|
| ಸಾಮಾನ್ಯ ಸಭೆ 2023/1.32 | ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಹಿತದೃಷ್ಟಿಯಿಂದ ಹಾಗೂ ಸುರಕ್ಷತೆಗಾಗಿ Web Application Firewall-(WAF) ಲೈಸನ್ಸ್ ನವೀಕರಣ ಅಥವಾ ಹೊಸದಾಗಿ ಖರೀದಿಸಿರುವ ಕುರಿತು. |
| ತೀರ್ಮಾನ | ಸದರಿ ವಿಷಯದ ಬಗ್ಗೆ ಅವಗಾಹಿಸಿದ ಸಿಂಡಿಕೇಟ್ ಈಗಾಗಲೇ ಅಳವಡಿಸಿದ Web Application Firewall (WAF) ಲೈಸನ್ಸ್ ಅವಧಿಯು ದಿನಾಂಕ: 05-02-2023ಕ್ಕೆ ಕೊನೆಗೊಳ್ಳುತ್ತಿರುವುದರಿಂದ, ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್, ಇನ್ನಿತರ ವೆಬ್‌ಸೈಟ್ ಮತ್ತು ಸರ್ವರ್ ಸಿಸ್ಟಮ್‌ಗಳ ಹ್ಯಾಕಿಂಗ್‌ಗೆ ಒಳಪಡುವುದನ್ನು ತಡೆಗಟ್ಟುವ ಸುರಕ್ಷತಾ ದೃಷ್ಟಿಯಿಂದ ಭಾರತ ಸರ್ಕಾರದ Government E-Market Place (GEM) Portal ಅಥವಾ ಟೆಂಡರ್ ಪ್ರಕಟಣೆಯನ್ನು ಹೊರಡಿಸಿ, ಆ ಮುಖೇನ ಖರೀದಿಸಲು ಸಮಯದ ಅಭಾವವಿರುವುದನ್ನು ಗಮನಿಸಿ ಸದರಿ ಸಾಧನ(Device) ವನ್ನು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಎಲ್ಲಾ ಪ್ರಕ್ರಿಯೆಗಳನ್ನು ಕೈಗೊಳ್ಳಲು ಸಮಯ ಬೇಕಾಗುವುದರಿಂದ ಹಾಗೂ ಈಗಾಗಲೇ ಸದರಿ ಸೇವೆಯನ್ನು ನೀಡುತ್ತಿರುವವರಿಂದ 03 ತಿಂಗಳ ಅವಧಿಗೆ ರೂ.4,39,970/-ಗಳ ವೆಚ್ಚದಲ್ಲಿ ಲೈಸನ್ಸ್ ಅನ್ನು ಖರೀದಿಸಿ, ಇದರ ವೆಚ್ಚವನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಭರಿಸಲು ಸಿಂಡಿಕೇಟ್ ನಿರ್ಣಯಿಸಿತು. |
| ಸಾಮಾನ್ಯ ಸಭೆ 2023/1.33 | 2022-23ನೇ ಸಾಲಿನಲ್ಲಿ ನಡೆಯಲಿರುವ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ರಚನೆ ಮಾಡಿರುವ ಪರೀಕ್ಷಾ ಮಂಡಳಿಗಳ ಬಗ್ಗೆ. |
| ತೀರ್ಮಾನ | 2022-23ನೇ ಶೈಕ್ಷಣಿಕ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಹಾಗೂ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ, ವಿಶ್ವವಿದ್ಯಾನಿಲಯದ ಕಾಯ್ದೆ 2000 ಪ್ರಕರಣ 36ರ ಅನ್ವಯ ಕಲಾ, ವಾಣಿಜ್ಯ, ಶಿಕ್ಷಣ, ಕಾನೂನು, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ತಾಂತ್ರಿಕ ನಿಕಾಯಗಳ ವಿಷಯಗಳಿಗೆ ಅಧ್ಯಕ್ಷರು ಮತ್ತು ಸದಸ್ಯರುಗಳನ್ನೊಳಗೊಂಡಂತೆ ಪರೀಕ್ಷಾ ಮಂಡಳಿಯನ್ನು ರಚಿಸಿ, ಆದೇಶ ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2023/1.34 | ಶ್ರೀ ರಾಘವೇಂದ್ರ ಕೆ.ಎಸ್., ದ್ವಿತೀಯ ದರ್ಜೆ ಸಹಾಯಕರು, ಆಡಳಿತ ಶಾಖೆ ಇವರ ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯದ ನಿಯೋಜನೆಯನ್ನು ಮುಂದುವರೆಸುವ ಬಗ್ಗೆ. |
| | ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ಕೆ.ಸಿ.ಎಸ್.ಆರ್ ಅಧಿನಿಯಮ ಪರಿಶೀಲಿಸುವುದು ಹಾಗೂ ಜನವರಿ 2023ರ ಮಾಹೆಯಲ್ಲಿ ಉನ್ನತ ಶಿಕ್ಷಣ ಇಲಾಖೆಯಿಂದ ಮಾತೃ ವಿಶ್ವವಿದ್ಯಾನಿಲಯದಿಂದ ಇತರೆ ವಿಶ್ವವಿದ್ಯಾನಿಲಯಕ್ಕೆ ನಿಯೋಜನೆ ಮಾಡಿರುವ ಎಲ್ಲಾ ಉದ್ಯೋಗಿಗಳನ್ನು ಬಿಡುಗಡೆಗೊಳಿಸಿ, ಮಾತೃ ವಿಭಾಗಕ್ಕೆ ಕಳುಹಿಸಬೇಕೆಂದು ನಿರ್ದೇಶಿರುವುದನ್ನು ಪರಾಮರ್ಶಿಸಿಸಬೇಕೆಂದರು. |
| ತೀರ್ಮಾನ | ಮುಂದೂಡಲಾಯಿತು |
| ಸಾಮಾನ್ಯ ಸಭೆ 2023/1.35 | ಪ್ರೊ. ಪಿ. ಮಾದೇಶ್, ಪ್ರಾಧ್ಯಾಪಕರು, ಭೂ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಇಲ್ಲಿಗೆ ನಿರ್ದೇಶಕರ ಹುದ್ದೆಗೆ ನಿಯೋಜನೆ ಮಾಡಿರುವ ಬಗ್ಗೆ. |
| | ರಾಜ್ಯಪಾಲರ ಅಧೀನ ಕಾರ್ಯದರ್ಶಿ, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜ ಭವನ, ಬೆಂಗಳೂರು ಇವರ ಪತ್ರ ಸಂಖ್ಯೆ: ಜಿಎಸ್ 13 ಜಿಯುಎಂ 2021, ದಿನಾಂಕ: 28-09-2021 ರಂದು ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಸುತ್ತೋಲೆ ಕಳುಹಿಸಲಾಗಿದ್ದು, ಸದರಿ ಸುತ್ತೋಲೆಯಲ್ಲಿ "ಕುಲಪತಿಗಳ ಅಧಿಕಾರ ಅವಧಿಯು 02 ತಿಂಗಳೊಳಗೆ ಕೊನೆಗೊಂಡರೆ, ಯಾವುದೇ ಪ್ರಮುಖ ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳದಂತೆ ಕರ್ನಾಟಕದ ವಿಶ್ವವಿದ್ಯಾನಿಲಯಗಳ ಕುಲಪತಿಗಳಿಗೆ ನಿರ್ದೇಶಿಸಲಾಗಿದೆ. ಯಾವುದೇ ಸನ್ನಿಹಿತ ಪ್ರಮುಖ ನೀತಿ ನಿರ್ಧಾರಗಳ ಅಗತ್ಯವಿದ್ದಲ್ಲಿ, ಪೂರ್ವಾನುಮತಿಯನ್ನು ಏಕರೂಪವಾಗಿ ಪಡೆಯಬೇಕು" ಎಂದು ನಿರ್ದೇಶಿಸಿರುವ ಹಿನ್ನೆಲೆಯಲ್ಲಿ, ದಿನಾಂಕ: 09-12-2022ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ದಿನಾಂಕ: 20-10-2022ರಂದು ಜರುಗಿದ "ಏಳನೇ ಸಾಮಾನ್ಯ ಸಿಂಡಿಕೇಟ್ ಸಭೆ" ಹಾಗೂ ದಿನಾಂಕ: 05-11-2022ರಂದು ಜರುಗಿದ |

| | |
|---|---|
| | "ಸಿಂಡಿಕೇಟಿನ ವಿಶೇಷ ಸಭೆ"ಗಳ ನಡವಳಿಗಳಲ್ಲಿ ತೀರ್ಮಾನಿಸಲಾಗಿರುವ **ಪ್ರಮುಖ ನೀತಿ ನಿರ್ಧಾರಗಳನ್ನು** ಹೊರತುಪಡಿಸಿ, ಉಳಿದ ನಡವಳಿಗಳನ್ನು ಅನುಮೋದನೆ ಮಾಡಬಹುದೆಂದು ನಿರ್ಣಯಿಸಲಾಗಿರುತ್ತದೆ. |
| **ತೀರ್ಮಾನ** | ಪ್ರೊ. ಪಿ. ಮಾದೇಶ್, ಪ್ರಾಧ್ಯಾಪಕರು, ಭೂ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಇಲ್ಲಿಗೆ ನಿರ್ದೇಶಕರ ಹುದ್ದೆಗೆ ನಿಯೋಜನೆ ಮಾಡಿರುವ ಸಂಬಂಧ ಈ ಕೆಳಕಂಡಂತೆ ಸಮಿತಿ ರಚಿಸಲು ಸಭೆಯು ಅನುಮೋದಿಸಿತು.<br><br>ಮಾನ್ಯ ಕುಲಸಚಿವ (ಪರೀಕ್ಷಾಂಗ) ಅವರ ಅಧ್ಯಕ್ಷತೆಯಲ್ಲಿ ಹಣಕಾಸು ಅಧಿಕಾರಿಗಳು, ಸಿಂಡಿಕೇಟ್ ಸದಸ್ಯರುಗಳಾದ ಡಾ. ಚೈತ್ರ ನಾರಾಯಣ ಶ್ರೀ ಎಂ.ಬಿ.ಗಪ್ಪಣ್ಣ, ಶ್ರೀಮತಿ ವೈ.ಕೆ.ಪವಿತ್ರ ಹಾಗೂ ಸಂಚಾಲಕರಾಗಿ ಉಪಕುಲಸಚಿವ (ಸಾಮಾನ್ಯ), ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. |
| **ಸಾಮಾನ್ಯ ಸಭೆ 2023/1.36** | ಶ್ರೀ ಎಂ.ಬಿ. ಗಪ್ಪಣ್ಣ, ಮಾನ್ಯ ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮೈಸೂರು ವಿಶ್ವವಿದ್ಯಾನಿಲಯದ ದೂರವಾಣಿ ವೆಚ್ಚ ಮತ್ತು ಅಂತರ್ಜಾಲ ವೆಚ್ಚದ ವಿವರವನ್ನು ಕೋರಿರುವ ಬಗ್ಗೆ. |
| **ತೀರ್ಮಾನ** | ಶ್ರೀ ಎಂ.ಬಿ. ಗಪ್ಪಣ್ಣ, ಮಾನ್ಯ ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಕೋರಿರುವ ವಿಶ್ವವಿದ್ಯಾನಿಲಯದ ದೂರವಾಣಿ ವೆಚ್ಚ ಮತ್ತು ಅಂತರ್ಜಾಲ ವೆಚ್ಚದ ವಿವರವನ್ನು ಕೂಲಂಕಷವಾಗಿ ಗಮನಿಸಲಾಯಿತು.<br><br>ಇದರಲ್ಲಿ Office Automation & Internet Facility ಗಳಿಗೆ ಅಧಿಕ ಮೊತ್ತ ಪಾವತಿಸಿರುವುದನ್ನು ಗಮನಿಸಿದ ಸಭೆಯು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ವಿವರವಾಗಿ ಹಣಕಾಸು ಅಧಿಕಾರಿಗಳು ಮಂಡಿಸಲು ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2023/1.37** | ಶ್ರೀ ಎಂ.ಬಿ. ಗಪ್ಪಣ್ಣ, ಮಾನ್ಯ ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮೈಸೂರು ವಿಶ್ವವಿದ್ಯಾನಿಲಯದ ವಾಹನಗಳ ಮಾಸಿಕ ಇಂಧನ ವೆಚ್ಚ ಮತ್ತು ನಿರ್ವಹಣಾ ವೆಚ್ಚದ ವಿವರವನ್ನು ಕೋರಿರುವ ಬಗ್ಗೆ. |
| **ತೀರ್ಮಾನ** | ಶ್ರೀ ಎಂ.ಬಿ. ಗಪ್ಪಣ್ಣ, ಮಾನ್ಯ ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮೈಸೂರು ವಿಶ್ವವಿದ್ಯಾನಿಲಯದ ವಾಹನಗಳ ಮಾಸಿಕ ಇಂಧನ ವೆಚ್ಚ ಮತ್ತು ನಿರ್ವಹಣಾ ವೆಚ್ಚದ ವಿವರವನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2023/1.38** | ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿರುವ ವಿವಿಧ ಅಧ್ಯಯನ ಪೀಠಗಳಲ್ಲಿ ಖಾಲಿ ಇರುವ ಸಂದರ್ಶಕ ಪ್ರಾಧ್ಯಾಪಕ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿರುವ ವಿವಿಧ ಅಧ್ಯಯನ ಪೀಠಗಳಲ್ಲಿ ಖಾಲಿ ಇರುವ ಸಂದರ್ಶಕ ಪ್ರಾಧ್ಯಾಪಕ ಹುದ್ದೆಯನ್ನು ಭರ್ತಿ ಮಾಡಲು ವಿವೇಚಾನುಸಾರ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2023/1.39** | ಮಾರ್ಗದರ್ಶಕರಾಗಿ ಮಾನ್ಯತೆ (Recognition of Guideship) ಪಡೆಯದೆ ಇರುವ ಖಾಯಂ ಅಧ್ಯಾಪಕರುಗಳ ಮಾಹಿತಿ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಅಧ್ಯಾಪಕರುಗಳು ವಿವಿಧ ವಿಷಯಗಳಲ್ಲಿ ಪಿಹೆಚ್.ಡಿ ಪಡೆದು ಮಾರ್ಗದರ್ಶಕರಾಗಿ ಮಾನ್ಯತೆ ಪಡೆಯದೆ ಇರುವ ಅಧ್ಯಾಪಕರುಗಳಿಂದ ಪಿಹೆಚ್.ಡಿ ಪ್ರವೇಶಾತಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಸಂಶೋಧನೆ ನಡೆಸಲು 02 ವರ್ಷಗಳ ಕಾಲಮಿತಿಯೊಳಗೆ ನೋಂದಣಿಯನ್ನು ಪಡೆಯಲು ಮಾರ್ಗದರ್ಶಕರ ಕೊರತೆಯಿಂದ ಸಂಶೋಧನಾ ಕಾರ್ಯ ಕೈಗೊಳ್ಳುವ ಅವಕಾಶದಿಂದ ವಂಚಿತರಾಗುತ್ತಿರುವುದರ ಸಂಬಂಧ ಕೂಲಂಕಷವಾಗಿ ಚರ್ಚಿಸಿದ ಸಿಂಡಿಕೇಟ್ ಈ ಕೆಳಕಂಡಂತೆ ನಿರ್ಣಯಿಸಿತು.<br><br>* ಪಿಹೆಚ್.ಡಿ ಪದವಿ ಪಡೆದಿರುವ ಖಾಯಂ ಅಧ್ಯಾಪಕರುಗಳು ಕಡ್ಡಾಯವಾಗಿ ಮೂರು ದಿನದೊಳಗೆ |

| | |
|---|---|
| | ಮಾರ್ಗದರ್ಶಕರಾಗಿ ಮಾನ್ಯತೆ (Recognition of Guideship) ಪಡೆಯಲು ವಿಶ್ವವಿದ್ಯಾನಿಲಯಕ್ಕೆ ಅರ್ಜಿ ಸಲ್ಲಿಸಬೇಕೆಂದು ವಿಶ್ವವಿದ್ಯಾನಿಲಯದ ವತಿಯಿಂದ ಸುತ್ತೋಲೆ ಹೊರಡಿಸುವುದು.<br>* ಸುತ್ತೋಲೆಯಲ್ಲಿ ನಿಗದಿಪಡಿಸಿರುವ ದಿನಾಂಕದೊಳಗೆ ಅರ್ಜಿ ಸಲ್ಲಿಸದಿದ್ದ ಅಧ್ಯಾಪಕರುಗಳಿಗೆ ನೋಟಿಸ್ ಜಾರಿಗೊಳಿಸುವುದು.<br>* ನೋಟಿಸ್ ಜಾರಿಗೊಳಿಸಿದ್ದರೂ ಕ್ರಮ ವಹಿಸದ ಅಧ್ಯಾಪಕರುಗಳಿಗೆ ನಿಯಮಾನುಸಾರ ಕ್ರಮ ತೆಗೆದುಕೊಳ್ಳುವುದು. |
| ಸಾಮಾನ್ಯ ಸಭೆ 2023/1.40 | Promotions to University Teachers Under UGC – CAS |
| ತೀರ್ಮಾನ | The recommendations of the Selection Committee in the subject Folklore for promotion of Dr. H.R.Chethana is approved from Academic Level-13A to Academic Level-14. The date of eligibility as Professor is considered from reporting to the duty as Professor. Further, the monetary benefits is extended to Dr.H.R.Chethana from the date of the decision of the Syndicate i.e. held on 03-02-2023. |
| ಸಾಮಾನ್ಯ ಸಭೆ 2023/1.41 | ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿ ಮಹಿಳಾ ವಿದ್ಯಾರ್ಥಿನಿಲಯ ಹಾಗೂ ಗಂಗೋತ್ರಿ ಶಾಲೆಗಳಲ್ಲಿ ಜೆ.ಕೆ. ಟೈರ್ಸ್ ವತಿಯಿಂದ ಶೌಚಾಲಯಗಳನ್ನು ನಿರ್ಮಾಣ ಮಾಡುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿ ಮಹಿಳಾ ವಿದ್ಯಾರ್ಥಿನಿಲಯ ಹಾಗೂ ಗಂಗೋತ್ರಿ ಶಾಲೆಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಹಾಗೂ ವಿಶ್ವವಿದ್ಯಾನಿಲಯದ ಆಸ್ತಿಗಳಿಗೆ ಧಕ್ಕೆಯಾಗದಂತೆ ಜೆ.ಕೆ. ಟೈರ್ಸ್ ವತಿಯಿಂದ ಶೌಚಾಲಯಗಳನ್ನು ನಿರ್ಮಾಣ ಮಾಡಲು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2023/1.42 | ಡಾ. ಸುರೇಶ ಎಂ., ಅರ್ಥಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು ಇವರಿಗೆ ಸಿ.ಎ.ಎಸ್. ಅಡಿ ಸಹ ಪ್ರಾಧ್ಯಾಪಕರ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ. |
| ತೀರ್ಮಾನ | The Selection Committee recommended Dr. Suresha.M, Department of Economics, Maharaja's College, Mysuru for promotion from the post of Associate Professor to the post of Professor (Academic Level-13A to Academic Level-14) under UGC Career Advancement Scheme, from date of eligibility 21-04-2022 and the monetary benefits is extended from the date of the decision of the Syndicate i.e. 05-11-2022. |
| ಸಾಮಾನ್ಯ ಸಭೆ 2023/1.43 | ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮತ್ತು ಮೈಸೂರು Urban Development Authority, Mysuru ಇವರುಗಳ ನಡುವೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. |
| ತೀರ್ಮಾನ | ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು Urban Development Authority, Mysuru ಇವುಗಳ ನಡುವೆ Research Studies, Capacity Building and Training, Policy Guideline/Bye-Laws Preparations, Internship Sponsorships and Innovations ಉದ್ದೇಶಕ್ಕಾಗಿ ಪರಸ್ಪರ ಒಡಂಬಡಿಕೆಗೆ ಒಳಪಡಲು ಕೋರಿರುವ ಪ್ರಸ್ತಾವನೆಯನ್ನು ಸಭೆಯು ಅನುಮೋದಿಸಿತು. |

ಇತರೆ ವಿಷಯಗಳು:

1) ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿರುವ Agri Business ಕೋರ್ಸ್ ಹಾಗೂ M.Ed ಕೋರ್ಸ್ ಮಾನ್ಯತೆಯ ಬಗ್ಗೆ.

**ಡಾ. ಚೈತ್ರ ನಾರಾಯಣ:** ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿರುವ Agri Business ಕೋರ್ಸ್ ಮಾನ್ಯತೆ ಪಡೆದಿರುವುದಿಲ್ಲ. ಹಾಗೆಯೇ M.Ed ಕೋರ್ಸ್‌ಗೂ ಸಹ ಮಾನ್ಯತೆಯಿರುವುದಿಲ್ಲ ಮತ್ತು M.Ed ಕೋರ್ಸ್‌ನ ಪರೀಕ್ಷೆಯಲ್ಲಿ ಒಬ್ಬ ವಿದ್ಯಾರ್ಥಿಗೆ 18 ಅಂಕ ಪಡೆದು ಅನುತ್ತೀರ್ಣರಾಗಿರುತ್ತಾರೆ. ತದನಂತರ ಮರುಮೌಲ್ಯಮಾಪನ ಮಾಡಿಸಿದಾಗ 63 ಅಂಕಗಳು ಬಂದಿರುತ್ತದೆ. 49 ಅಂಕಗಳು ವ್ಯತ್ಯಾಸ ಬಂದಿರುವುದಕ್ಕೆ ಸ್ಪಷ್ಟೀಕರಣ ನೀಡಬೇಕೆಂದರು.

**ಕುಲಸಚಿವರು:** M.Ed ಕೋರ್ಸ್ NCTE ಮಾನ್ಯತೆ ಪಡೆದಿರುವುದಿಲ್ಲವೆಂದು ಹಾಗೂ ಮಾನ್ಯತೆ ಪಡೆಯಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಎಂ.ಇಡಿ ಪ್ರಶಿಕ್ಷಣಾ ವಿದ್ಯಾರ್ಥಿಗಳು ಮನವಿ ಪತ್ರವನ್ನು ದಿನಾಂಕ: 19-01-2023ರಂದು ಸಲ್ಲಿಸಿರುತ್ತಾರೆ.

**ಪ್ರೊ. ಜಿ.ವೆಂಕಟೇಶ್‌ಕುಮಾರ್:** ಮಾನ್ಯತೆ ದೊರಕಿಲ್ಲದ ಕೋರ್ಸ್‌ಗೆ ಸಂಬಂಧಿಸಿದಂತೆ ಶಿಕ್ಷಣ ಮಂಡಳಿ ಸಭೆಯಲ್ಲಿ ಪ್ರಸ್ತಾಪಿಸಿ, Argi Business ಕೋರ್ಸ್ ಅನ್ನು Commerce ಅಥವಾ Management ಗೆ ಸೇರ್ಪಡೆಗೊಳಿಸಿದ್ದರೆ, ಮಾನ್ಯತೆ ಪಡೆಯಲು ಅನುಕೂಲವಾಗುತ್ತಿತ್ತು. NCTE ಗೆ ಅರ್ಜಿ ಸಲ್ಲಿಸಿ ಮಾನ್ಯತೆ ನೀಡಬೇಕೆಂದು ಅವರು ಕೋರುವ ದಾಖಲೆಗಳನ್ನು ಒದಗಿಸಿದ್ದರೆ, ಮಾನ್ಯತೆ ದೊರಕಿರುವುದು. ಈ ಪ್ರಕರಣದಿಂದ ಆ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೋಸ ಮಾಡಿದಂತಾಗುತ್ತದೆ.

**ಮಾನ್ಯ ಕುಲಪತಿಗಳು:** ಮಾನ್ಯತೆ ಪಡೆಯದ ಕೋರ್ಸುಗಳಲ್ಲಿ ವಿದ್ಯಾರ್ಥಿಗಳು ಅಧ್ಯಯನ ಮಾಡಿದ್ದರೂ. ಎಲ್ಲಿಯೂ ಉದ್ಯೋಗ ದೊರಕುವುದಿಲ್ಲ. M.Ed ಕೋರ್ಸ್ ಮಾನ್ಯತೆ ಪಡೆಯದ ಬಗ್ಗೆ ಶಿಕ್ಷಣ ನಿಕಾಯದ ಡೀನರೊಂದಿಗೆ ಮಾತನಾಡಿ, ಮಾನ್ಯತೆ ಪಡೆದುಕೊಳ್ಳಲು ಕ್ರಮವಹಿಸಲಾಗುವುದೆಂದರು.

**ಕುಲಸಚಿವರು (ಪರೀಕ್ಷಾಂಗ):** ವಿದ್ಯಾರ್ಥಿಗೆ ಮರುಮೌಲ್ಯಮಾಪನದಲ್ಲಿ 49 ಅಂಕಗಳು ವ್ಯತ್ಯಾಸವಾಗಿರುವುದಕ್ಕೆ ಮಾತನಾಡಿ, ಪರೀಕ್ಷಾ ಅವಧಿಯಲ್ಲಿ ಅಧ್ಯಾಪಕರಿಗೆ 16+16 ಸಂಖ್ಯೆಯಂತೆ 02 ಬಂಡಲ್ ವಿತರಿಸಲಾಗಿತ್ತು. ಬಂಡಲ್ close ಮಾಡುವಾಗ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಅದಲು ಬದಲು ಮಾಡಿರುವುದು ಕಂಡುಬಂದಿದೆ. UUCMS ಮೂಲಕ ಫಲಿತಾಂಶವನ್ನು ಪ್ರಕಟಿಸಲಾಗಿದ್ದು, ಫಲಿತಾಂಶವನ್ನು revert ಮಾಡುವುದಕ್ಕೆ ಅಧಿಕಾರವಿರುವುದಿಲ್ಲ. ಈ ಸಂಬಂಧ ಬೆಂಗಳೂರಿಗೆ ಪತ್ರ ಬರೆದು ವಿದ್ಯಾರ್ಥಿಯ ಅಂಕವನ್ನು ಸರಿಪಡಿಸುವುದಕ್ಕೆ ಕ್ರಮ ವಹಿಸಲಾಗುತ್ತಿದೆ.

**ಡಾ. ಜಯ ಶಂಕರ್ ಎನ್:** NCTE ಗೆ ಮಾನ್ಯತೆ ನೀಡಬೇಕೆಂದು ಅರ್ಜಿ ಸಲ್ಲಿಸಿ, ಅವರು ಕೋರುವ ಪೂರಕ ದಾಖಲಾತಿಗಳನ್ನು ಒದಗಿಸುವುದರಿಂದ ಮಾನ್ಯತೆ ಸಿಗುತ್ತದೆ.

ಇತರೆ ವಿಷಯಗಳು:

1. **ಶ್ರೀಮತಿ ಪವಿತ್ರ** ಅವರು ಮಾತನಾಡಿ ರೇಡಿಯೋ ಮಾನಸಕ್ಕೆ ಸಂಬಂಧಿಸಿದಂತೆ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿಗಳಿಗೆ ರೇಡಿಯೋ ಮಾನಸವನ್ನು 03 ದಿನಗಳ ಅಂದರೆ 6 ಘಂಟೆಗಳ ಪ್ರಾಯೋಗಿಕ ರೀತಿ ಸದ್ಬಳಕೆ ಮಾಡಿಕೊಂಡರೆ ಅವರಿಗೆ ಅನುಕೂಲವಾಗುತ್ತದೆ. ಆದುದರಿಂದ ಅದನ್ನು ಅನುಷ್ಠಾನಗೊಳಿಸಬೇಕೆಂದು ಸಭೆಗೆ ಕೋರಿದರು. ಲಲಿತ ಕಲಾ ಕಾಲೇಜುಗಳಲ್ಲಿ ಇರುವ ಡಿಪ್ಲೊಮಾ ಕೋರ್ಸ್‌ಗಳ ಬಗ್ಗೆ ಕಾರ್ಯಕ್ರಮಗಳ ಮಧ್ಯದಲ್ಲಿ ಪ್ರಚಾರ ಪಡಿಸಬೇಕೆಂದು ಅಧ್ಯಕ್ಷರಿಗೆ ಕೋರಿದರು

   **ಡಾ. ಚೈತ್ರ ನಾರಾಯಣ** ಅವರು ಮಾತನಾಡಿ ರೇಡಿಯೋ ಮಾನಸ ಒಂದು ವಿಭಾಗಕ್ಕೆ ಸೀಮಿತಗೊಳಿಸಬಾರದು. ಆ ರೀತಿ ನಿರ್ಬಂಧಿಸಿದರೆ ಪ್ರತಿಯೊಂದು ಇಲಾಖೆಯೂ ತಮ್ಮದೇ ಆದ ಬೇಡಿಕೆಗಳೊಂದಿಗೆ ಬರುತ್ತಾರೆ, ಇದು ಸೂಕ್ತವಾದ ನಿರ್ಧಾರವಾಗುವುದಿಲ್ಲ ಎಂದು ಅಭಿಪ್ರಾಯಪಟ್ಟರು.

   **ಪ್ರೊ. ವೆಂಕಟೇಶ್ ಕುಮಾರ್:** 2 ಅಥವಾ 3 ಘಂಟೆಗಳೆಂದು ಸೀಮಿತಗೊಳಿಸುವುದು ತಪ್ಪಾಗುತ್ತದೆ ಬದಲಿಗೆ ಆದ್ಯತೆ ಮೇಲೆ ನೀಡುವುದು ಸೂಕ್ತ ಹಾಗೂ MOU ನಲ್ಲಿ ಇರುವಂತೆ ಕಾರ್ಯಗತಗೊಳಿಸಬೇಕೆಂದು ಅಭಿಪ್ರಾಯಿಸಿದರು.

   **ಮಾನ್ಯ ಕುಲಪತಿಯವರು** ಮಾತನಾಡಿ ಮುಂದಿನ ದಿನಗಳಲ್ಲಿ ಆದ್ಯತೆ ಮೇಲೆ ನೀಡಲಾಗುವುದೆಂದು ಸಭೆಗೆ ತಿಳಿಸಿದರು.

2. **ಪ್ರೊ. ವೆಂಕಟೇಶ್ ಕುಮಾರ್:** ಕುಲಪತಿಗಳ ಅವಧಿಯು ಎರಡು ತಿಂಗಳಿಗೆ ಮುಕ್ತಾಯವಾಗುವ ಮುಂಚೆ ಯಾವುದೇ Policy mattersಗೆ ಸಂಬಂಧಿಸಿದ ನಿರ್ಧಾರಗಳನ್ನು ಕೈಗೊಳ್ಳಬಾರದು ಎಂಬ ಸರ್ಕಾರದ ಆದೇಶ ಇದ್ದರೂ, ಕೆಲವು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ ಮತ್ತು ಕಾರ್ಯಗತಗೊಳಿಸಲಾಗಿದೆ ಹಾಗೂ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಇದರ ಬಗ್ಗೆ ಚರ್ಚಿಸಿ ಸಮಿತಿಯನ್ನು ರಚಿಸುವುದಾಗಿ ತೀರ್ಮಾನಿಸಲಾಗಿತ್ತು ಎಂದು ತಿಳಿಸಿದರು.

   **ಮಾನ್ಯ ಕುಲಪತಿಯವರು** ಮಾತನಾಡಿ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಕುಲಪತಿಗಳಿಗೆ ವಿವೇಚಾನುಸಾರ ಅಧಿಕಾರವನ್ನು ನೀಡದೆ ಇದ್ದು ಹಾಗೂ ನಡವಳಿಯಲ್ಲಿ ದಾಖಲಿಸದೆ ಇರುವುದರಿಂದ ಸಮಿತಿಯನ್ನು ರಚಿಸಲಾಗಿಲ್ಲ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

   **ಮಾನ್ಯ ಕುಲಪತಿಯವರ ಆದೇಶದಂತೆ** ಹಿಂದಿನ ಕುಲಪತಿಯವರು ನೀಡಿರುವ ಆದೇಶಗಳನ್ನು ಪರಿಶೀಲಿಸಲು ಈ ಕೆಳಕಂಡ ಸದಸ್ಯರನ್ನು ಒಳಗೊಂಡಂತೆ ಸಮಿತಿಯನ್ನು ಸಿಂಡಿಕೇಟ್ ಸಭೆಯಲ್ಲಿ ರಚಿಸಲಾಯಿತು.

   ಮಾನ್ಯ ಕುಲಸಚಿವ (ಪರೀಕ್ಷಾಂಗ) ಅವರ ಅಧ್ಯಕ್ಷತೆಯಲ್ಲಿ ಹಣಕಾಸು ಅಧಿಕಾರಿಗಳು, ಸಿಂಡಿಕೇಟ್ ಸದಸ್ಯರುಗಳಾದ ಡಾ. ಚೈತ್ರ ನಾರಾಯಣ ಶ್ರೀ ಎಂ.ಬಿ. ಗಪ್ಪಣ್ಣ, ಶ್ರೀಮತಿ ವೈ.ಕೆ. ಪವಿತ್ರ ಹಾಗೂ ಸಂಚಾಲಕರಾಗಿ ಉಪಕುಲಸಚಿವ (ಸಾಮಾನ್ಯ), ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

3. **ಡಾ. ಚೈತ್ರ ನಾರಾಯಣ** ಅವರು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಭದ್ರತಾ ಸೇವೆಯನ್ನು ಒದಗಿಸುತ್ತಿರುವ ಮೆ: ರಂಗನಾಥ ಎಂಟರ್ ಪ್ರೈಸಸ್, ಮೈಸೂರು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಭದ್ರತಾ ಸಿಬ್ಬಂದಿಗಳಿಗೆ ಕನಿಷ್ಟ ವೇತನ ಹಾಗೂ weekly half ಅನ್ನು

ನೀಡುತ್ತಿಲ್ಲ ಎಂಬ ವಿಷಯವನ್ನು ಪ್ರಸ್ತಾಪಿಸಲಾಗಿತ್ತು ಮತ್ತು ಮೆ:ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರಿಗೆ ನೋಟಿಸ್ ಜಾರಿಗೊಳಿಸಬೇಕೆಂದು ಸಹ ತಿಳಿಸಲಾಗಿತ್ತು. ಆದರೆ ಇದುವರೆವಿಗೂ ನೋಟಿಸ್ ಅನುಷ್ಠಾನಗೊಳಿಸಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

**ಮಾನ್ಯ ಕುಲಪತಿಯವರು ಮಾತನಾಡಿ** ದೂರುದಾರರಿಂದ ಒಂದು ಮನವಿಯನ್ನು ಸ್ವೀಕರಿಸಿ ಮೆ: ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರಿಗೆ ನೋಟಿಸ್ ಜಾರಿ ಮಾಡುವುದಾಗಿ ತಿಳಿಸಿದರು ಹಾಗೂ ಮನವಿಯ ಬಗ್ಗೆ ಚರ್ಚಿಸಿ ಈ ಮಧ್ಯೆ ಮಾರ್ಗಸೂಚಿಗಳನ್ನು ಹೊರಡಿಸಲಾಗುವುದೆಂದು ತಿಳಿಸಿದರು.

**ಪ್ರೊ. ವೆಂಕಟೇಶ್ ಕುಮಾರ್** ಮೆ: ರಂಗನಾಥ ಎಂಟರ್‌ಪ್ರೈಸಸ್‌ಗೆ ಷರತ್ತುಗಳನ್ನು ವಿಧಿಸಬೇಕು ಪಾಲಿಸದೆ ಇದ್ದಲ್ಲಿ ಶಿಸ್ತಿನ ಕ್ರಮ ಜರುಗಿಸಬೇಕು ಎಂದು ಸಭೆಗೆ ತಿಳಿಸಿದರು.

4. ಪ್ರತಿ ಮಾಹೆಯಲ್ಲಿ ಸಿಂಡಿಕೇಟ್ ಸಭೆ ನಡೆಸಬೇಕೆಂದು ನಿಯಮ ಇದ್ದರೂ ಜನವರಿ ತಿಂಗಳಲ್ಲಿ ಸಭೆಯನ್ನು ನಡೆಸದೆ ಇರುವುದಕ್ಕೆ **ಪ್ರೊ. ವೆಂಕಟೇಶ್ ಕುಮಾರ್** ಅವರು ಆಕ್ಷೇಪವನ್ನು ವ್ಯಕ್ತಪಡಿಸಿದರು.

5. **ಪ್ರೊ. ವೆಂಕಟೇಶ್ ಕುಮಾರ್** ಅವರು ಮಾತನಾಡಿ ರಾಜ್ಯಪಾಲರ ಅಧೀನ ಕಾರ್ಯದರ್ಶಿ, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜ ಭವನ, ಬೆಂಗಳೂರು ಇವರ ಪತ್ರ ಸಂಖ್ಯೆ: ಜಿಎಸ್ 13 ಜಿಯುಎಂ 2021, ದಿನಾಂಕ: 28-09-2021ರಂದು ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಸುತ್ತೋಲೆ ಕಳುಹಿಸಲಾಗಿದ್ದು, ಸದರಿ ಸುತ್ತೋಲೆಯಲ್ಲಿ "ಕುಲಪತಿಗಳ ಅಧಿಕಾರ ಅವಧಿಯು 02 ತಿಂಗಳೊಳಗೆ ಕೊನೆಗೊಂಡರೆ, ಯಾವುದೇ ಪ್ರಮುಖ ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳದಂತೆ ಕರ್ನಾಟಕದ ವಿಶ್ವವಿದ್ಯಾನಿಲಯಗಳ ಕುಲಪತಿಗಳಿಗೆ ನಿರ್ದೇಶಿಸಲಾಗಿದೆ. ಯಾವುದೇ ಸನ್ನಿಹಿತ ಪ್ರಮುಖ ನೀತಿ ನಿರ್ಧಾರಗಳ ಅಗತ್ಯವಿದ್ದಲ್ಲಿ, ಪೂರ್ವಾನುಮತಿಯನ್ನು ಏಕರೂಪವಾಗಿ ಪಡೆಯಬೇಕು" ಎಂದು ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಡಾ. ಶೇಖರ್ ಅವರಿಗೆ ನೀಡಿರುವ ಆದೇಶವನ್ನು ಹಿಂಪಡೆಯಬೇಕಾಗಿ ಸಭೆಗೆ ತಿಳಿಸಿದರು. ಇನ್ನು ಮುಂದೆ ಈ ರೀತಿ ಮರುಕಳಿಸದಂತೆ ಕ್ರಮವಹಿಸಲು ಸೂಚಿಸಿದರು.

6. **ಡಾ. ಚೈತ್ರ ನಾರಾಯಣ** ಅವರು ಮಾತನಾಡಿ ಕೆಲವೊಂದು ಕಾಲೇಜು ಹಾಗೂ ವಿಭಾಗಗಳಲ್ಲಿ ಮುಖ್ಯಸ್ಥರು, ಅತಿಥಿ ಉಪನ್ಯಾಸಕರಿಗೆ ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ಕಾರ್ಯಭಾರವಿದ್ದರೂ ಅವರಿಗೆ ನೀಡುತ್ತಿಲ್ಲ ಎಂದು ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು ಮತ್ತು ವಿಶ್ವವಿದ್ಯಾನಿಲಯದ ಗಮನಕ್ಕೆ ತರದೆ ಕೆಲವು ಅತಿಥಿ ಉಪನ್ಯಾಸಕರಿಗೆ, ಉದಾ. : ಶ್ರೀ ಗೌತಮ್ ದೇವನೂರು, ಅತಿಥಿ ಉಪನ್ಯಾಸಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಮಾ.ಗಂ., ಮೈಸೂರು ಇವರಿಗೆ ಕಾರ್ಯಭಾರವಿದ್ದರು ಕಾರ್ಯಭಾರವನ್ನು ನೀಡಿರುವುದಿಲ್ಲ ಹಾಗೂ ಕೆಲವು ವಿಭಾಗಗಳಲ್ಲಿ ಹೆಚ್ಚಿನ ಕಾರ್ಯಭಾರವನ್ನು ನೀಡುತ್ತಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

**ಕುಲಸಚಿವರು** ಮಾತನಾಡಿ ಕುಲಪತಿಯವರ ಒಪ್ಪಿಗೆ ಇಲ್ಲದೆ ಯಾರನ್ನೂ ಬಿಡುಗಡೆಗೊಳಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು. ಸಂಬಂಧಪಟ್ಟ ಎಲ್ಲಾ ಕಾಲೇಜು ಹಾಗೂ ವಿಭಾಗಗಳಿಗೆ ಸುತ್ತೋಲೆಯನ್ನು ಹೊರಡಿಸುವುದಾಗಿ ಸಭೆಗೆ ತಿಳಿಸಿದರು.

7. **ಡಾ.ಚೈತ್ರ ನಾರಾಯಣ** ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯವು ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಉಚಿತ ಆಹಾರ ಮತ್ತು ಹಾಸ್ಟೆಲಿನ ಸೌಲಭ್ಯಗಳನ್ನು ಒದಗಿಸುತ್ತಿದೆ ಆದರೆ 12

ಅಥವಾ 13 ದೈಹಿಕ ವಿಕಲಾಂಗ ವಿದ್ಯಾರ್ಥಿಗಳಿದ್ದು ಅವರಿಗೆ ಆದೇಶವನ್ನು ನೀಡಿರುವುದಿಲ್ಲ ಇವರಿಗೂ ಈ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ತಿಳಿಸಿದರು.

**ಡಾ.ಚೈತ್ರ ನಾರಾಯಣ** ಮಾತನಾಡಿ ಇದಕ್ಕೆ ಸಂಬಂಧಿಸಿದಂತೆ ಆದೇಶವನ್ನು ಹೊರಡಿಸಬೇಕಾಗಿ ಕೋರಿದರು.

8. ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರಗಳಾದ ಚಾಮರಾಜನಗರ, ಹಾಸನ ಮತ್ತು ಮಂಡ್ಯ ಕೇಂದ್ರಗಳಿಗೆ ಜಮೀನು, ಕಟ್ಟಡ, ಪೀಠೋಪಕರಣ ಹಾಗೂ ಇತರೆ ಸಾಮಾಗ್ರಿಗಳನ್ನು ವರ್ಗಾಯಿಸುವ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು **ಪ್ರೊ. ವೆಂಕಟೇಶ್ ಕುಮಾರ್** ಅವರು ಕೋರಿದರು.

**ಕುಲಸಚಿವರು** ಮಾತನಾಡಿ ಸಂಪೂರ್ಣವಾದ ಮಾಹಿತಿಯನ್ನು ಸಂಬಂಧಿತರಿಂದ ಪಡೆದು ನೀಡುವುದಾಗಿ ತಿಳಿಸಿದರು.

9. **ಡಾ.ಚೈತ್ರ ನಾರಾಯಣ** ಅವರು ಮಾತನಾಡಿ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಮಹಿಳಾ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಹೆಚ್.ಆರ್.ಎ. ರೂ.1800/- ರಿಂದ ರೂ. 1000/- ಗಳಿಗೆ ಕಡಿತಗೊಳಿಸಲು ನಿರ್ಧರಿಸಲಾಗಿತ್ತು. ಆದರೆ ಅವರಿಗೆ ಆದೇಶ ಜಾರಿಯಾಗಿಲ್ಲ. ಅವರು ಇದುವರೆವಿಗೂ ಹೆಚ್.ಆರ್.ಎ.ರೂ. 1800/- ಅನ್ನು ಪಾವತಿಸುತ್ತಿದ್ದಾರೆ. ಈ ಕೂಡಲೇ ಅವರಿಗೆ ಕಡಿತಗೊಳಿಸಿರುವ ಹೆಚ್.ಆರ್.ಎ. ಆದೇಶವನ್ನು ಜರೂರಾಗಿ ನೀಡಬೇಕೆಂದು ಸಭೆಗೆ ಕೋರಿದರು. ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯಕ್ಕೆ ಬ್ಲಾಕ್-2, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಹೆಚ್.ಆರ್.ಎ ಮೊತ್ತವನ್ನು ರೂ. 1,000/-ಗಳಿಗೆ ನಿಗದಿಪಡಿಸಿರುವ ಆದೇಶವು ಜಾರಿಯಾಗಿರುತ್ತದೆ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು. ಹಾಗೂ ಕೋವಿಡ್ ಸಂದರ್ಭದಲ್ಲಿ ಮನ್ನಾ ಮಾಡಬೇಕಾಗಿತ್ತು ಅದು ಕೂಡ ಆದೇಶ ಆಗಿಲ್ಲ ಎಂಬ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಿಸಿದರು.

| | **ಇತರೆ ವಿಷಯಗಳು:** |
|---|---|
| **ಸಾಮಾನ್ಯ ಸಭೆ 2023/ಇತರೆ ವಿಷಯ** | ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಕುಕ್ಕರಹಳ್ಳಿ ಕೆರೆಯ ಮೀನು ಪಾಶುವಾರು ಗುತ್ತಿಗೆ ಹಕ್ಕನ್ನು ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾ ಮಂಡಳ (ನಿ) ಮೈಸೂರು ಇವರಿಗೆ ಗುತ್ತಿಗೆಯನ್ನು ನೀಡುವ ಬಗ್ಗೆ: |
| | **ಡಾ.ಚೈತ್ರ ನಾರಾಯಣ ಮತ್ತು ಶ್ರೀ ಗಪ್ಪಣ್ಣ**ನವರು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಕುಕ್ಕರಹಳ್ಳಿ ಕೆರೆಯ ಮೀನು ಪಾಶುವಾರು ಗುತ್ತಿಗೆ ಹಕ್ಕನ್ನು ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾ ಮಂಡಳ (ನಿ) ಮೈಸೂರು ಇವರಿಗೆ ಗುತ್ತಿಗೆಯನ್ನು ನೀಡಲಾಗಿದ್ದು ಅದರ ಅವಧಿಯು ಮುಗಿದಿರುತ್ತದೆ. ಕೋವಿಡ್-19 ಕಾರಣದಿಂದಾಗಿ ಲಾಕ್‌ಡೌನ್ ವಿಧಿಸಿದ್ದರಿಂದ ಮೀನುಗಾರಿಕೆ ನಡೆಸಲು ಗುತ್ತಿಗೆದಾರರಿಗೆ ಸಾಧ್ಯವಾಗದ ಕಾರಣ 2020-21 ಮತ್ತು 2021-22 ಗಳ ಅವಧಿಗೆ ಗುತ್ತಿಗೆ ಮೊತ್ತವನ್ನು ಪಾವತಿಸಿಕೊಂಡು ಲಭ್ಯವಿರುವ ಮೀನನು ಹಿಡಿದುಕೊಳ್ಳಲು ಅನುಮತಿ ನೀಡಲಾಗಿತ್ತು. ಅದರಂತೆ ಕುಕ್ಕರಹಳ್ಳಿ ಕೆರೆಯ ಮೀನು ಪಾಶುವಾರು ಗುತ್ತಿಗೆ ಅವಧಿಯನ್ನು ವಿಸ್ತರಿಸಿಕೊಡುವಂತೆ ಕೋರಿರುತ್ತಾರೆ. ಮುಂದುವರೆದು ವಿಶ್ವವಿದ್ಯಾನಿಲಯಕ್ಕೆ ಪ್ರತಿ ವರ್ಷವು ರೂ. 6,05,000/- ಆದಾಯ ಬರುವುದರಿಂದ ಅವರಿಗೆ ಕುಕ್ಕರಹಳ್ಳಿ ಕೆರೆಯ ಈ ಹಿಂದೆ ನಿಗದಿಪಡಿಸಿದ ಗುತ್ತಿಗೆ ಮೊತ್ತವನ್ನು ಮುಂದಿನ ಶೇ.5ರಷ್ಟು ಹೆಚ್ಚಿಸಿ 5 ವರ್ಷಗಳ ಅವಧಿಗೆ ಕುಕ್ಕರಹಳ್ಳಿ ಕೆರೆಯ ಮೀನುಪಾಶುವಾರು ಗುತ್ತಿಗೆ ಹಕ್ಕನ್ನು ಮಹಾಮಂಡಳಿಗೆ ವಿಸ್ತರಿಸಿಕೊಡುವುದು ಸೂಕ್ತ ಎಂದು ತಿಳಿಸಿದರು.<br>**ಕುಲಸಚಿವರು** ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾ ಮಂಡಳ (ನಿ) ಮೈಸೂರು ನ್ಯಾಯಾಲಯದ ಮೊರೆ ಹೋಗಿರುವುದನ್ನು ಸಿಬ್ಬಂದಿಯವರು ಮೌಖಿಕವಾಗಿ ತಿಳಿಸಿದನ್ನು ಸಭೆಯ ಗಮನಕ್ಕೆ ತಂದರು.<br>**ಶ್ರೀಮತಿ ಪವಿತ್ರ** ಅವರು ಮಾತನಾಡಿ ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾ ಮಂಡಳ (ನಿ.,) ಮೈಸೂರು ಇವರು ನ್ಯಾಯಾಲಯದ ಮೊರೆ ಹೋಗಿರುವುದನ್ನು ಪರಿಶೀಲಿಸಲು ತಿಳಿಸಿದರು. |
| **ತೀರ್ಮಾನ** | ನ್ಯಾಯಾಲಯದ ಮೊರೆ ಹೋಗಿದ್ದಾರೊ ಇಲ್ಲವೋ ಎಂಬುದನ್ನು ಪರಿಶೀಲಿಸಿದ ನಂತರ ನಿಯಮಾನುಸಾರ ಮುಂದಿನ ನಿರ್ಧಾರ ತೆಗೆದುಕೊಳ್ಳುವುದಾಗಿ ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿದರು. |
| **ಸಾಮಾನ್ಯ ಸಭೆ ಇತರೆ ವಿಷಯ** | ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಷಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಅತಿಥಿ ಉಪನ್ಯಾಸಕರುಗಳನ್ನು 2022-23ನೇ ಶೈಕ್ಷಣಿಕ ಸಾಲಿಗೆ ಆಹ್ವಾನಿಸುವ ಬಗ್ಗೆ. |
| | **ಪ್ರೊ.ವೆಂಕಟೇಶ್‌ಕುಮಾರ್** ಅವರು ಮಾತನಾಡಿ ದಿನಾಂಕ 9-12-2022 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಕ್ರಮ ತೆಗೆದುಕೊಂಡ ವರದಿಯಲ್ಲಿ ವಿಷಯ 8.23ಕ್ಕೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಷಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಅತಿಥಿ ಉಪನ್ಯಾಸಕರುಗಳಿಗೆ ಇದುವರೆವಿಗೂ ನೇಮಕಾತಿ ಆದೇಶ ನೀಡಿರುವುದಿಲ್ಲ. ಇವರಿಗೆ ಈ ಕೂಡಲೇ ಕ್ರಮಕೈಗೊಂಡು 01-12-2022 ರಿಂದ ನೇಮಕಾತಿ ಆದೇಶ ನೀಡಬೇಕೆಂದು ತಿಳಿಸಿದರು.<br>**ಕುಲಸಚಿವರು** ಮಾತನಾಡಿ ಕಳೆದ ಶೈಕ್ಷಣಿಕ ಸಾಲಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ |

| | |
|---|---|
| | ಅತಿಥಿ ಉಪನ್ಯಾಸಕರನ್ನೇ ಈ ಶೈಕ್ಷಣಿಕ ಸಾಲಿಗೂ ಮುಂದುವರೆಸಿ ಈಗಾಗಲೇ ಹೊರಡಿಸಲಾಗಿರುವ ಆದೇಶವು ದಿನಾಂಕ 1-12-2022ರಿಂದ ಅನ್ವಯವಾಗುತ್ತದೆ ಎಂದು ತಿಳಿಸಿ ಈ ಕುರಿತು ದಿನಾಂಕ ನಮೂದಿಸಿ ಸೂಕ್ತ ತಿದ್ದುಪಡಿ ಆದೇಶ ನೀಡಲಾಗುವುದು. ಆದಾಗ್ಯೂ ಅತಿಥಿ ಉಪನ್ಯಾಸಕರು ಹಾಜರಾದ ದಿನಗಳಿಗೆ ವೇತನ ನೀಡಲು ನಿಯಮಾನುಸಾರ ಕ್ರಮವಹಿಸುವ ಜವಾಬ್ದಾರಿಯು ಸಂಪೂರ್ಣವಾಗಿ ವಿಭಾಗದ ಮುಖ್ಯಸ್ಥರದ್ದೇ ಆಗಿರುತ್ತದೆಂದು ತಿಳಿಸಿದರು. |
| **ತೀರ್ಮಾನ** | ಅತಿಥಿ ಉಪನ್ಯಾಸಕರುಗಳಿಗೆ 1-12-2022ರಿಂದ ಜಾರಿಗೆ ಬಂದಂತೆ ತಿದ್ದುಪಡಿ ಮಾಡಿ ಸೂಕ್ತ ಆದೇಶವನ್ನು ಹೊರಡಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ ಇತರೆ ವಿಷಯ** | ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಗೆ ಪ್ರಭಾರ ಪ್ರಾಂಶುಪಾಲರುಗಳನ್ನು ನೇಮಕ ಮಾಡುವ ಬಗ್ಗೆ. |
| | **ಪ್ರೊ.ವೆಂಕಟೇಶ್‌ಕುಮಾರ್ ಮತ್ತು ಡಾ. ಚೈತ್ರ ನಾರಾಯಣ** ಅವರು ಮಾತನಾಡಿ ಅಧ್ಯಾಪಕರುಗಳ ಕರಡು ಜೇಷ್ಠತಾ ಪಟ್ಟಿಯನ್ನು ಪರಿಶೀಲಿಸಿದಾಗ ಪ್ರೊ. ಯಶೋಧರವರು ಹಿರಿಯರಾಗಿರುವುದರಿಂದ ಅವರಿಗೆ ಮಹಾರಾಜ ಕಾಲೇಜಿನ ಪ್ರಾಂಶುಪಾಲರಾಗಿ ನೇಮಕ ಮಾಡಬೇಕೆಂದು ಹಾಗೂ ಇವರು ವಯೋನಿವೃತ್ತಿಯ ಅವಧಿಯು ಇನ್ನು 15 ದಿನ ಮಾತ್ರ ಇರುವುದರಿಂದ ಜರೂರಾಗಿ ಆದೇಶವನ್ನು ಹೊರಡಿಸಬೇಕೆಂದು ತಿಳಿಸಿದರು. |
| **ತೀರ್ಮಾನ** | ಈ ಸಂಬಂಧ ಮಾನ್ಯ ಕುಲಪತಿಯವರು ಮಾತನಾಡಿ ಜೇಷ್ಠತಾ ಪಟ್ಟಿಯನ್ನು ಮರುಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು. |
| **ಸಾಮಾನ್ಯ ಸಭೆ 2023/ಇತರೆ ವಿಷಯಗಳು** | ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಅಧ್ಯಾಪಕ/ಅಧ್ಯಾಪಕೇತರ ನೌಕರರುಗಳ ಪದನಾಮ ಬದಲಾವಣೆ ಬಗ್ಗೆ. |
| | ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ರಾಜ್ಯಪಾಲರ ಅಧೀನ ಕಾರ್ಯದರ್ಶಿ, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜ ಭವನ, ಬೆಂಗಳೂರು ಇವರ ಪತ್ರ ಸಂಖ್ಯೆ: ಜಿಎಸ್ 13 ಜಿಯುಎಂ 2021, ದಿನಾಂಕ: 28-09-2021ರಂದು ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಸುತ್ತೋಲೆ ಕಳುಹಿಸಲಾಗಿದ್ದು, ಸದರಿ ಸುತ್ತೋಲೆಯಲ್ಲಿ "ಕುಲಪತಿಗಳ ಅಧಿಕಾರ ಅವಧಿಯು 02 ತಿಂಗಳೊಳಗೆ ಕೊನೆಗೊಂಡರೆ, ಯಾವುದೇ ಪ್ರಮುಖ ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳದಂತೆ ಕರ್ನಾಟಕದ ವಿಶ್ವವಿದ್ಯಾನಿಲಯಗಳ ಕುಲಪತಿಗಳಿಗೆ ನಿರ್ದೇಶಿಸಲಾಗಿದೆ. ಯಾವುದೇ ಸನ್ನಿಹಿತ ಪ್ರಮುಖ ನೀತಿ ನಿರ್ಧಾರಗಳ ಅಗತ್ಯವಿದ್ದಲ್ಲಿ, ಪೂರ್ವಾನುಮತಿಯನ್ನು ಏಕರೂಪವಾಗಿ ಪಡೆಯಬೇಕು" ಎಂದು ನಿರ್ದೇಶಿಸಿರುವ ಹಿನ್ನೆಲೆಯಲ್ಲಿ, ದಿನಾಂಕ:09-12-2022ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ದಿನಾಂಕ:20-10-2022ರಂದು ಜರುಗಿದ "ಏಳನೇ ಸಾಮಾನ್ಯ ಸಿಂಡಿಕೇಟ್ ಸಭೆ" ಹಾಗೂ ದಿನಾಂಕ: 05-11-2022ರಂದು ಜರುಗಿದ "ಸಿಂಡಿಕೇಟಿನ ವಿಶೇಷ ಸಭೆ"ಗಳ ನಡವಳಿಗಳಲ್ಲಿ ತೀರ್ಮಾನಿಸಲಾಗಿರುವ **ಪ್ರಮುಖ ನೀತಿ ನಿರ್ಧಾರಗಳನ್ನು** ಹೊರತುಪಡಿಸಿ, ಉಳಿದ ನಡವಳಿಗಳನ್ನು ಅನುಮೋದನೆ ಮಾಡಬಹುದೆಂದು ನಿರ್ಣಯಿಸಲಾಗಿದ್ದರೂ, ಇನ್ನು ತಾತ್ಕಾಲಿಕ ಅಧ್ಯಾಪಕ/ ಅಧ್ಯಾಪಕೇತರ ನೌಕರರುಗಳ ಪದನಾಮ ಬದಲಾವಣೆ ಮಾಡಿರುವುದಿಲ್ಲ ಹಾಗೂ |

| | |
|---|---|
| | ಡಾ. ಕೆ.ಪಿ. ಲಲಿತ, ಅತಿಥಿ ಉಪನ್ಯಾಸಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರನ್ನು ಪ್ರಸಾರಾಂಗದ ಉಪನಿರ್ದೇಶಕರ ಹುದ್ದೆಯಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸಲು ನೇಮಕಾತಿ ಮಾಡಿರುವುದು ಸರಿಯಾದ ಕ್ರಮವಲ್ಲ. ಆದುದರಿಂದ ಇವರುಗಳ ಆದೇಶವನ್ನು ಹಿಂಪಡೆಯಬೇಕೆಂದು ತಿಳಿಸಿದರು.<br><br>ಈ ಸಂಬಂಧ ಸದರಿ ಸಿಂಡಿಕೇಟ್ ಸಭೆಯಲ್ಲಿ ವಿಚಾರಣೆಯನ್ನು ನಡೆಸಲು ಒಂದು ಸಮಿತಿಯನ್ನು ರಚಿಸಲಾಯಿತು. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಅಧ್ಯಾಪಕ/ಅಧ್ಯಾಪಕೇತರ ನೌಕರರುಗಳ ಪದನಾಮ ಬದಲಾವಣೆ ಹಾಗೂ ಡಾ. ಕೆ.ಪಿ.ಲಲಿತ, ಅತಿಥಿ ಉಪನ್ಯಾಸಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರನ್ನು ಪ್ರಸಾರಾಂಗದ ಉಪನಿರ್ದೇಶಕರ ಹುದ್ದೆಯಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸಲು ನೇಮಕಾತಿ ಮಾಡಿರುವ ಆದೇಶಗಳು ಪ್ರಮುಖ ನೀತಿ ನಿರ್ಧಾರಗಳ ವಿಷಯವಾಗಿರುವುದರಿಂದ ಆದೇಶವನ್ನು ತಾತ್ಕಾಲಿಕವಾಗಿ ತಡೆಹಿಡಿದು ವಿಚಾರಣೆಯನ್ನು ನಡೆಸಲು ಈ ಕೆಳಕಂಡಂತೆ ಒಂದು ಸಮಿತಿಯನ್ನು ರಚಿಸಲಾಯಿತು.<br><br>ಮಾನ್ಯ ಕುಲಸಚಿವ (ಪರೀಕ್ಷಾಂಗ) ಅವರ ಅಧ್ಯಕ್ಷತೆಯಲ್ಲಿ ಹಣಕಾಸು ಅಧಿಕಾರಿಗಳು, ಸಿಂಡಿಕೇಟ್ ಸದಸ್ಯರುಗಳಾದ ಡಾ. ಚೈತ್ರ ನಾರಾಯಣ ಶ್ರೀ ಎಂ.ಬಿ.ಗಪ್ಪಣ್ಣ, ಶ್ರೀಮತಿ ವೈ.ಕೆ. ಪವಿತ್ರ ಹಾಗೂ ಸಂಚಾಲಕರಾಗಿ ಉಪಕುಲಸಚಿವ (ಸಾಮಾನ್ಯ), ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. |
| **ಸಾಮಾನ್ಯ ಸಭೆ 2023/ಇತರೆ ವಿಷಯ** | **ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ವೇತನವನ್ನು ಪಾವತಿಸುವ ಬಗ್ಗೆ.** |
| | ಪ್ರೊ. ವೆಂಕಟೇಶ್‌ಕುಮಾರ್ ಅವರು ಮಾತನಾಡಿ ಅತಿಥಿ ಉಪನ್ಯಾಸಕರು ಈಗಾಗಲೇ ವಿಭಾಗ/ ಕಾಲೇಜು/ ಕೇಂದ್ರಗಳಲ್ಲಿ ಬೋಧನಾ/ ಪ್ರಾಯೋಗಿಕ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ ಇದುವರೆವಿಗೂ ವಿಶ್ವವಿದ್ಯಾನಿಲಯದಿಂದ ನೇಮಕಾತಿ ಆದೇಶ ನೀಡಿರುವುದಿಲ್ಲ. ಇವರುಗಳಿಗೆ ಯಾವ ದಿನಾಂಕದಿಂದ ಜಾರಿಗೆ ಬಂದಂತೆ ಆದೇಶ ನೀಡುವ ಸಂಬಂಧ ಸ್ಪಷ್ಟೀಕರಣ ನೀಡಬೇಕೆಂದು ತಿಳಿಸಿದರು.<br><br>ಮಾನ್ಯ ಕುಲಪತಿ ಹಾಗೂ ಹಣಕಾಸು ಅಧಿಕಾರಿಗಳು ಮಾತನಾಡಿ ದಿನಾಂಕ 11-01-2023ರಂದು ನಡೆದ ಮೈಸೂರು ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ವಿಶೇಷ ಹಣಕಾಸು ಸಮಿತಿ ಸಭೆಯಲ್ಲಿ ಸರ್ಕಾರದ ಅಪರ ಮುಖ್ಯ ಕಾಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರುಗಳು ಮೈಸೂರು ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರ ವೇತನ ಪರಿಷ್ಕರಣೆಯ ಕುರಿತು ಆರ್ಥಿಕ ಇಲಾಖೆಯು ಲಿಖಿತ ಹಾಗೂ ಮೌಖಿಕ ಅಸಮ್ಮತಿಯನ್ನು ಸಭೆಯಲ್ಲಿ ವ್ಯಕ್ತಪಡಿಸಿರುವುದನ್ನು ಸಭೆಯಲ್ಲಿ ಪ್ರಸ್ತಾಪಿಸಿದರು. |

| | |
|---|---|
| **ತೀರ್ಮಾನ** | ಅತಿಥಿ ಉಪನ್ಯಾಸಕರ ವೇತನಕ್ಕೆ ಸಂಬಂಧಿಸಿದಂತೆ ಹಣಕಾಸು ಸಮಿತಿಯ ಸಭೆಯಲ್ಲಿ ಸರ್ಕಾರದ ಪ್ರತಿನಿಧಿಗಳು ವೇತನ ಹೆಚ್ಚಳದ ಪ್ರಸ್ತಾವನೆಯನ್ನು ಒಪ್ಪದೆ ಇರುವುದರಿಂದ, 2023-24ನೇ ಸಾಲಿನ ವಿಶ್ವವಿದ್ಯಾನಿಲಯದ ಆಯವ್ಯಯದಲ್ಲಿ ಈ ಸಂಬಂಧ ಅವಕಾಶವನ್ನು ಮಾಡಿಕೊಂಡು ನಂತರ ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆದು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ಮಾನ್ಯ ಕುಲಸಚಿವರು ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ**    **ಕುಲಪತಿಗಳು ಮತ್ತು ಅಧ್ಯಕ್ಷರು**